DOP 15th of every month from Udupi HPO
ಬೆಲೆ ರೂ.2.50

# ಶ್ರೀ ಶಾರದಾ

ಮಾಸಪತ್ರಿಕೆ – 15 ಆಗಸ್ಟ್ 2009

॥ ಧಿಯೋ ಯೋನಃ ಪ್ರಚೋದಯಾತ್ ॥

**ಹೆಬ್ಬಾರ್ ಎಂಟರ್‌ಪ್ರೈಸಸ್**

ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101.

*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*


ಫೋನ್ : 2531493 (0), 2530851 (R), ಮೊಬೈಲ್ : 94484 37893

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-9 ಸಂಚಿಕೆ-8 ಪುಟಗಳು-6 Registered Under No.J/UDP/1260/2009-2011 Dated from 01-12-2008 to 30-11-2011

# "ಶ್ರೀ ಶಂಕರಾಚಾರ್ಯರ ಅಷ್ಟೋತ್ತರ ಸ್ತೋತ್ರ ಮನೆಮನೆಯಲ್ಲೂ ಧ್ವನಿಸಲಿ"

## – ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥರು




"ಸನಾತನ ಹಿಂದೂ ಧರ್ಮವು ಭಾರತದಲ್ಲಿ ಸ್ಥಿರಗೊಳ್ಳಲು ಆಚಾರ್ಯ ಶಂಕರರ ಅವತಾರವಾಯಿತು. ಸ್ಥಾನಿಕ ಸಮಾಜವು ಕಳೆದ 25 ವರ್ಷಗಳಿಂದ ಚಾತುರ್ಮಾಸ್ಯ ಸಂದರ್ಭದಲ್ಲಿ ಗುರುಗಳ ಭೇಟಿಯನ್ನು ನಿಷ್ಠೆಯಿಂದ ಮಾಡುತ್ತಾ ಬಂದಿದೆ. ಇದು ತುಂಬಾ ಸಂತೋಷದ ವಿಷಯ. ಮುಂದೆಯೂ ಪ್ರತಿವರ್ಷ ಸ್ಥಾನಿಕ ಸಮಾಜವು ಶ್ರೀಮಠದ ಧರ್ಮಾಧಿಕಾರಿ ಶ್ರೀ ಸತ್ಯಶಂಕರ ಬೊಳ್ಳಾವರ ನೇತೃತ್ವದಲ್ಲಿ ಒಟ್ಟಾಗಿ ಚಾತುರ್ಮಾಸ್ಯ ಭೇಟಿಗೆ ಬರುವಂತಾಗಲಿ. ಉತ್ತರ ಭಾರತದಲ್ಲಿ ಪ್ರತಿ ಮನೆಯಲ್ಲೂ ಶ್ರೀ ಶಂಕರಾಚಾರ್ಯರ ಭಾವಚಿತ್ರದೊಂದಿಗೆ ಅಷ್ಟೋತ್ತರ ಶತನಾಮಾವಳಿಯನ್ನು ಪಠಿಸುತ್ತಿದ್ದಾರೆ. ಇದು ಇತ್ತೀಚಿನ ದಿನಗಳಲ್ಲಿ ತುಂಬಾ ಪ್ರಸಿದ್ಧಿಯನ್ನು ಪಡೆದಿದೆ. ನಮ್ಮಲ್ಲಿಯೂ ಪ್ರತಿ ದಿನವೂ ಮನೆ ಮನೆಯಲ್ಲೂ ಶ್ರೀ ಶಂಕರಾಚಾರ್ಯರ ಭಾವಚಿತ್ರವನ್ನಿಟ್ಟು ಅಷ್ಟೋತ್ತರ ಶತನಾಮಾವಳಿಯನ್ನು ಪಠಿಸುವಂತಾಗಲಿ" ಎಂದು ಶ್ರೀಶೃಂಗೇರಿ ಪೀಠಾಧೀಶ್ವರರಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ಚಾತುರ್ಮಾಸ್ಯ ಕಾಲದಲ್ಲಿ ತಮ್ಮ ದರ್ಶನಾಕಾಂಕ್ಷಿಗಳಾಗಿ ಆಗಮಿಸಿದ ಸಮಾಜಬಾಂಧವರಿಗೆ ಫಲಮಂತ್ರಾಕ್ಷತೆ ನೀಡಿ ಆಶೀರ್ವಚಿಸಿದರು.


ಈ ವರ್ಷ ಗಣೇಶ ಚತುರ್ಥಿಯ ಹಿಂದಿನ ಭಾನುವಾರ ಏಕಾದಶಿ ಇದ್ದುದರಿಂದ ಅದರ ಹಿಂದಿನ ಭಾನುವಾರ ಅಂದರೆ ತಾ.09-08-2009ರಂದು ಜಗದ್ಗುರುಗಳ ಚಾತುರ್ಮಾಸ್ಯ ಭೇಟಿ ಕಾರ್ಯಕ್ರಮದಲ್ಲಿ ಉಡುಪಿ, ಮಂಗಳೂರು, ಕುಂದಾಪುರ, ಕಾರ್ಕಳ, ಬೆಂಗಳೂರು, ಪುತ್ತೂರು, ಬೆಳ್ತಂಗಡಿ, ಸುಳ್ಯ, ಮೈಸೂರು, ಪಾವಂಜೆ ಹಾಗೂ ದೂರದ ಕಾಸರಗೋಡು ಮತ್ತು ಮುಂಬಯಿಯಿಂದ ಸ್ಥಾನಿಕ ಸಮಾಜಬಾಂಧವರು ಒಮ್ಮನಸ್ಸಿನಿಂದ ಹೊರೆಕಾಣಿಕೆ ನೀಡಿ ಪಾದಪೂಜೆ ಸಲ್ಲಿಸಿ ಜಗದ್ಗುರುಗಳ ಆಶೀರ್ವಾದವನ್ನು ಪಡೆದರು. ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠ ಸಮಗ್ರ ಭಾರತದಲ್ಲಿರುವ ಶಿಷ್ಯ ವರ್ಗಕ್ಕೆ ಸೂಕ್ತ ಧಾರ್ಮಿಕ ನಿರ್ದೇಶನ ನೀಡುತ್ತಿದೆ. ಸ್ಥಾನಿಕ ಬ್ರಾಹ್ಮಣ ಸಮಾಜದವರು ಶ್ರೀ ಪೀಠಕ್ಕೆ ನಿರಂತರ ನಿಷ್ಠೆಯನ್ನು ತೋರಿಸುತ್ತಾ ಬಂದಿದ್ದಾರೆ. ಚಾತುರ್ಮಾಸ್ಯ ಭೇಟಿಗೆ ಬರಲು ಪ್ರಾರಂಭಿಸಿ 25 ವರ್ಷವಾಗಿವೆ. ಆದ್ದರಿಂದ ಈ ವಿಶೇಷತೆಯನ್ನು ನೆನಪಿಸಿಕೊಳ್ಳಲು ಮತ್ತು ಸ್ಮರಣೀಯವಾಗಿ ಉಳಿಯುವಂತೆ ಮಾಡಲು ಮುಂದಿನ ವರ್ಷ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದೆಂದು ನಿರ್ಣಯಿಸಲಾಗಿದೆ. ಸ್ಥಾನಿಕ ಬ್ರಾಹ್ಮಣ ಸಮಾಜದವರು ಮತ್ತು ಸಂಘಗಳ ಪ್ರತಿನಿಧಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಹಕರಿಸಬೇಕೆಂದು ಶ್ರೀ ಶೃಂಗೇರಿ ಮಠದ ಧರ್ಮಾಧಿಕಾರಿಗಳಾದ ಶ್ರೀ ಕೆ. ಸತ್ಯಶಂಕರ ಬೊಳ್ಳಾವ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ತಿಳಿಸಿದರು. ಅಂದು ಬೆಳಿಗ್ಗೆ 7-30ಗಂಟೆಗೆ ಉಡುಪಿಯ ಶ್ರೀ ಶಾರದಾ ಮಂಟಪದಿಂದ ಶೃಂಗೇರಿಗೆ ಎರಡು ಮಿನಿ ಬಸ್‌ಗಳಲ್ಲಿ ಸುಮಾರು 50 ಜನ ಸಮಾಜ ಬಾಂಧವರು ಒಟ್ಟಾಗಿ ಪ್ರಯಾಣಿಸಿದ್ದರು. ಚಾತುರ್ಮಾಸ್ಯ ಭೇಟಿ ಕಾರ್ಯಕ್ರಮ ಮುಗಿಸಿ ಅಪರಾಹ್ನ 4-00 ಗಂಟೆಗೆ ಶೃಂಗೇರಿಯಿಂದ ಹೊರಟು ಸಂಜೆ 6-30 ಗಂಟೆಗೆ ಉಡುಪಿಯನ್ನು ತಲುಪಿದರು. ಬೆಳಿಗ್ಗೆ ಮತ್ತು ಸಂಜೆ ಸೋಮೇಶ್ವರದಲ್ಲಿ ಲಘು ಉಪಹಾರವನ್ನು ಏರ್ಪಡಿಸಲಾಗಿತ್ತು. ಚಾತುರ್ಮಾಸ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಹಕರಿಸಿದ ಎಲ್ಲಾ ಸಮಾಜಬಾಂಧವರಿಗೆ ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಡಳಿತ ಮಂಡಳಿ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಅರ್ಪಿಸುತ್ತದೆ.

---

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ – 576 102**





॥ನಮೋ ದೇವ್ಯೈ ಮಹಾದೇವ್ಯೈ ಶಿವಾಯ್ಯೈ ಸತತಂ ನಮಃ॥

## ಆಮಂತ್ರಣ

ಮಾನ್ಯ ಸಮಾಜ ಬಾಂಧವರೇ,

ಸ್ವಸ್ತಿ! ಶ್ರೀ ವಿರೋಧಿ ನಾಮ ಸಂವತ್ಸರದ ಕನ್ಯಾ ಮಾಸ ದಿನ ೧೨ ಸಲುವ ಅಶ್ವಯುಜ ಶುದ ೧೦ ಯು, ತಾ.28-09-2009ನೇ ಸೋಮವಾರ

**ವಿಜಯದಶಮಿ ದಿನದಂದು**

## ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ. ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಪೂರ್ವಾಹ್ನ ಮತ್ತು ಅಪರಾಹ್ನದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

| | | |
|---|---|---|
| **ಅಂಬಲಪಾಡಿ ಕೃಷ್ಣರಾವ್** | **ಸಿ. ಎಸ್. ರಾವ್** | **ಕೆ. ವೇಣುಗೋಪಾಲ್ ರಾವ್** |
| ಗೌರವಾಧ್ಯಕ್ಷರು | ಅಧ್ಯಕ್ಷರು | ಕಾರ್ಯದರ್ಶಿ |

**ಹಾಗೂ ಕಾರ್ಯಕಾರಿ ಸಮಿತಿಯ ಸವಿನಯ ಆಮಂತ್ರಣ**

**ವಿ.ಸೂ. :** 1. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು.
2. **ಸಮಾಜ ಬಾಂಧವರು ಈ ಪ್ರಕಟಣೆಯನ್ನೇ ಆಮಂತ್ರಣ ಎಂದು ತಿಳಿಯಬೇಕಾಗಿ ವಿನಂತಿ.**
3. ವಿಜಯದಶಮಿ ಸ್ಪರ್ಧೆಗಳ ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್



ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.
-ಸಂ.


## ಚಿಂತನ

ಒಬ್ಬ ಹಿರಿಯ ನಿವೃತ್ತ ಅಧ್ಯಾಪಕರೊಬ್ಬರು ನನಗೆ ಆಪ್ತರಾಗಿದ್ದರು. ಎಲ್ಲಿಗೆ ಹೋಗುವಾಗಲೂ ನಾವು ಜೊತೆಯಾಗಿ ಹೋಗುತ್ತಿದ್ದೆವು. ಅವರ ನಿವೃತ್ತಿ ವೇತನವನ್ನು ಪ್ರತಿ ತಿಂಗಳ 1-2ನೇ ತಾರೀಕಿ ನಂದು ಟ್ರೆಜರಿ ಆಫೀಸಿನಲ್ಲಿ ತೆಗೆದುಕೊಳ್ಳುತ್ತಿದ್ದರು. (ಹಿಂದೆ ಈ ಪದ್ಧತಿ ಇತ್ತು)

ಆಗ ಅಲ್ಲಿಗೆ ಬೇರೆ ಸರಕಾರೀ ನೌಕರರೂ ನಿವೃತ್ತಿ ವೇತನ ಪಡೆಯಲು ಬರುತ್ತಿದ್ದರು. ಪ್ರತಿಯೊಬ್ಬನನ್ನು ನನಗೆ ತೋರಿಸುತ್ತ ಅವ ನೋಡು ಪೋಲಿಸು ಪೇದೆಯಾಗಿದ್ದವ, ಇವ ನೋಡು ತಾಲೂಕು ಕಚೇರಿ ಉದ್ಯೋಗಿ, ಓ ಅಲ್ಲಿ ಕುಳಿತಿದ್ದಾನೆ ನೋಡು ಅವನು ಪಂಚಾಯತ್ ಕಾರ್ಯದರ್ಶಿಯಾಗಿ ನಿವೃತ್ತನಾದವನು - ಹೀಗೆ ಹಲವಾರು ವ್ಯಕ್ತಿಗಳನ್ನು ತೋರಿಸುತ್ತಾ ಅವರೆಲ್ಲ ಲಂಚ, ಭ್ರಷ್ಟಾಚಾರದಿಂದ ತಮ್ಮ ಸೇವಾವಧಿಯನ್ನು ಕಳೆದು ನಿವೃತ್ತರಾದವರು. ಈಗ ನಿವೃತ್ತಿ ವೇತನ ಪಡೆದುಕೊಳ್ಳಲು ಬೇರೊಬ್ಬರ ಸಹಾಯಬೇಕು. ಒಬ್ಬನ ಕೈಕಾಲು ನಡುಗುತ್ತಿದ್ದರೆ ಒಬ್ಬನಿಗೆ ಸೊಂಟವೇ ಬಲವಿಲ್ಲ, ಮತ್ತೊಬ್ಬನಿಗೆ ಕಣ್ಣು ಕಾಣಿಸದು. ಇವರ ಜೀವನ ನೋಡು...

ನಾನಾದರೂ ಅಧ್ಯಾಪಕನಾಗಿ ನಿವೃತ್ತನಾದವ. ಈ ಅಧ್ಯಾಪಕ ವೃತ್ತಿ ಇದೆಯಲ್ಲ; ಇದು ಲಂಚ, ಭ್ರಷ್ಟಾಚಾರ ಇಲ್ಲದ ವೃತ್ತಿ. ಆದ್ದರಿಂದ ನನ್ನಂತಹ ಅಧ್ಯಾಪಕರು ನೋಡು ನಿವೃತ್ತಿ ವೇತನ ಪಡೆಯಲು ಹೇಗೆ ಯಾರ ಸಹಾಯವೂ ಇಲ್ಲದೆ ಬರುತ್ತಾರೆ ! ಎಂದು ಅಲ್ಲಿಗೆ ಬಂದಿದ್ದ ಬೇರೆ ತಮ್ಮಂತಹ ನಿವೃತ್ತ ಅಧ್ಯಾಪಕರನ್ನು ನನಗೆ ತೋರಿಸುವರು.

ಅವರು ಹೇಳಿದಂತೆ ಈ ವಿಚಾರದ ಬಗ್ಗೆ ಯೋಚಿಸಬೇಕು. ಲಂಚ, ಭ್ರಷ್ಟಾಚಾರದಿಂದ ತುಂಬಿದ ಸೇವಾವಧಿ ಪೂರೈಸಿದ ಎಲ್ಲರೂ ಹೀಗೆಯೇ ಇರುವರೇ? ಲಂಚಕೋರರು, ಭ್ರಷ್ಟಾಚಾರಿಗಳು ಈ ಬಗ್ಗೆ ಯೋಚಿಸುವರೇ?

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



– ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಒಂದು ದಿನ ಯಶೋದೆಯು ಕೃಷ್ಣನಿಗೆ ಬೆಣ್ಣೆ ತಿನ್ನಿಸಬೇಕೆಂದುಕೊಂಡು ತಾನೇ ಮೊಸರು ಕಡೆಯಲು ಕುಳಿತಳು. ಅಷ್ಟರಲ್ಲಿ ಬಾಲಕೃಷ್ಣನ ಆಗಮನವಾಯಿತು. ಅವನಿಗೆ ಸ್ತನ್ಯಪಾನ ಮಾಡುವ ಆಸೆಯಾಗಿತ್ತು. ತಾಯಿಯು ಕೈಹಿಡಿದು ಮೊಸರು ಕಡೆಯುವುದನ್ನು ನಿಲ್ಲಿಸಿ ಅವಳ ತೊಡೆಯ ಮೇಲೆ ಕುಳಿತು ಸ್ತನ್ಯಪಾನ ಮಾಡಲಾರಂಭಿಸಿದನು. ಅಷ್ಟರಲ್ಲಿ ಒಲೆಯ ಮೇಲಿಟ್ಟ ಹಾಲಿನ ಮಡಕೆಯಲ್ಲಿ ಹಾಲುಕ್ಕಲು ಬಂತು. ಯಶೋದೆ ಬಲಾತ್ಕಾರದಿಂದ ಕೃಷ್ಣನ ಸ್ತನ್ಯಪಾನವನ್ನು ತಡೆದು ಒಲೆಯ ಹತ್ತಿರ ಓಡಿದಳು. ಇದರಿಂದ ಸಿಟ್ಟಿಗೆದ್ದ ಬಾಲಕನು ಮೊಸರಿನ ಗಡಿಗೆಯನ್ನು ಒಡೆದುಹಾಕಿ ಮತ್ತೊಂದು ಕೋಣೆಗೆ ಓಡಿದನು. ಅಲ್ಲೊಂದು ಒರಳಿನ ಮೇಲೆ ಕುಳಿತುಕೊಂಡು ಗೊಲ್ಲ ಹುಡುಗರಿಗೂ, ಕೋತಿಗಳಿಗೂ ಬೆಣ್ಣೆ ಹಂಚತೊಡಗಿದನು. ಯಶೋದೆ ಮರಳಿ ಬಂದು ಒಡೆದ ಮೊಸರಿನ ಗಡಿಗೆಯನ್ನು ನೋಡಿ ಕೋಪಗೊಳ್ಳುವ ಬದಲು ನಕ್ಕಳು. ಮಗನನ್ನು ಹುಡುಕುತ್ತಾ ಅವನಿದ್ದ ಕೋಣೆಗೆ ಹೋದಳು. ಕೋತಿಗಳೂ, ಗೊಲ್ಲ ಹುಡುಗರೂ ಅವಳನ್ನು ನೋಡಿ ಓಡಿ ಹೋದರು. ಈಗ ಯಶೋದೆಗೆ ನಿಜವಾಗಿಯೂ ಸಿಟ್ಟುಬಂದಿತ್ತು. ಅವಳು ಕೈಯಲ್ಲೊಂದು ಕೋಲು ಹಿಡಿದುಕೊಂಡು ಕೃಷ್ಣನ ಕಡೆಗೆ ನಡೆದಳು. ಆಗ ಆ ತುಂಟನು



ಅವಳ ಕೈಗೆ ಸಿಗದೆ ಅಲ್ಲಿಂದ ಪಲಾಯನ ಮಾಡಿದನು. ಅವನ ಹಿಂದೆ ಯಶೋದೆಯೂ ಓಡಿದಳು. ಈ ಸಂಗತಿ ಗೋಪಸ್ತ್ರೀಯರಿಗೆ ತಿಳಿದು ಅಲ್ಲಿ ಗುಂಪುಗೂಡಿದರು. ಮಗುವಿಗೆ ಹೊಡೆಯಬಾರದೆಂದು ಪರಿಪರಿಯಾಗಿ ಬೇಡಿಕೊಂಡರು. ಅಷ್ಟರಲ್ಲಿ ಯಶೋದೆಯ ಕೋಪವೂ ಶಾಂತವಾಗಿತ್ತು. ಆದರೆ ತಾನು ಬೇರೆ ಕೆಲಸಕ್ಕೆ ಹೋಗಬೇಕಾಗಿತ್ತಾದುದರಿಂದ ಆ ತುಂಟ ಪೋರನನ್ನು ಒರಳಿಗೆ ಕಟ್ಟಿದರೆ ಒಳಿತೆಂದುಕೊಂಡು ಮೊಸರು ಕಡೆಯುವ ಹಗ್ಗವನ್ನು ತಂದು ಅದರಿಂದ ಅವನನ್ನು ಕಟ್ಟಲು ಹೋದಳು. ಆದರೆ ಅದು ಎರಡಂಗುಲದಷ್ಟು ಗಿಡ್ಡವಾಯಿತು. ಹೀಗೆ ಅನೇಕ ಹಗ್ಗಗಳನ್ನು ಸೇರಿಸಿದರೂ ಎರಡಂಗುಲದಷ್ಟು ಕೊರತೆ ನೀಗಲಿಲ್ಲ. ಅವಳೂ, ಗೋಪಿಯರೂ ವಿಸ್ಮಯಗೊಂಡರು. ಆಗ ಆ ಮಾಯಾವಿ ಬಾಲಕನೆಂದನು "ಅಮ್ಮ ಹಗ್ಗಕೊಡು, ನಾನೇ ಕಟ್ಟಿಕೊಳ್ಳುತ್ತೇನೆ'' ಹಾಗೆಂದು ಒಂದೇ ಹಗ್ಗದಿಂದ ತನ್ನನ್ನು ಕಟ್ಟಿಕೊಂಡನು. ಯಶೋದೆ ಅವನನ್ನು ಚೆನ್ನಾಗಿ ಬಿಗಿದು ಕಟ್ಟಿ ತನ್ನ ಕೆಲಸಕ್ಕೆ ಹೊರಟು ಹೋದಳು.

ಮನೆಯ ಅಂಗಳದಲ್ಲಿ ಎರಡು ಅರ್ಜುನ ವೃಕ್ಷಗಳು ಅಕ್ಕಪಕ್ಕ ಬೆಳೆದಿದ್ದವು. ನಿಜವಾಗಿಯೂ ಕುಬೇರನ ಮಕ್ಕಳಾದ ನಳಕೂಬರ, ಮಣಿಗ್ರೀವರೇ ಶಾಪಗ್ರಸ್ತರಾಗಿ ಮರಗಳಾಗಿದ್ದರು. ನಾರದರೇ ಅವರಿಗೆ ಶಾಪ ಕೊಟ್ಟವರು. ಅವರು ಯೌವನ, ಸೌಂದರ್ಯ, ಧನಗಳ ಮದದಿಂದ ಮೆರೆಯುತ್ತಿದ್ದರು. ಒಮ್ಮೆ ಮಂದಾಕಿನಿಯಲ್ಲಿ ಅನೇಕ ಅಪ್ಸರೆಯರೊಡನೆ ಅವರು ಜಲಕ್ರೀಡೆಯಾಡುತ್ತಿದ್ದರು. ಇಬ್ಬರು ವಾರುಣೀ ಎಂಬ ಮದ್ಯವನ್ನು ಕುಡಿದು ಅಮಲಿನಿಂದ ಮೈಮರೆತಿದ್ದರು. ಅದೇ ಸಮಯದಲ್ಲಿ ಅಲ್ಲಿ ಹಾದು ಹೋಗುತ್ತಿದ್ದ ದೇವರ್ಷಿ ನಾರದರನ್ನು ನೋಡಿ ಅಪ್ಸರೆಯರು ಭಯದಿಂದ ನೀರಿಂದ ಮೇಲೆ ಬಂದು ಬಟ್ಟೆಗಳನ್ನು ಧರಿಸಿದರು. ಆದರೆ ಮದೋನ್ಮತ್ತರಾದ ನಳಕೂಬರ, ಮಣಿಗ್ರೀವರು ನಾರದರನ್ನು ನೋಡಿ ಗಹಗಹಿಸಿ ನಕ್ಕರೇ ಹೊರತು ಬಟ್ಟೆಗಳನ್ನು ಧರಿಸಲಿಲ್ಲ. ಇದರಿಂದ ಅವಮಾನಿತರಾಗಿ ನಾರದರು ಅವರನ್ನು ಮರಗಳಾಗುವಂತೆ ಶಪಿಸಿದರು. ಆದರೂ ಅವರ ಅನುಗ್ರಹದಿಂದ ಅವರಿಗೆ ಭಗವಂತನ ಸ್ಮರಣೆಯಿದ್ದು ದೇವತೆಗಳ ನೂರು ವರ್ಷ ಕಳೆದ ಮೇಲೆ ಶ್ರೀಕೃಷ್ಣನ ದಯೆಯಿಂದ ಶಾಪವಿಮೋಚನೆಯಾಗುವ ವರವೂ ಅವರಿಗೆ ಇತ್ತು. ಅಂತಹ ಸಮಯವೀಗ ಬಂದಿತ್ತು. ಬಾಲಕೃಷ್ಣನು ಆ ಒರಳನ್ನು ಎಳೆದುಕೊಂಡು ಆ ಎರಡು ಮರಗಳ ಮಧ್ಯದಿಂದ ನುಗ್ಗಿದನು. ಆಗ ಆ ಒರಳು ಮರಗಳ ಮಧ್ಯದಲ್ಲಿ ಸಿಕ್ಕಿಹಾಕಿಕೊಂಡ ಕಾರಣ ಅವುಗಳು ಮುರಿದುಬಿದ್ದವು. ನಳಕೂಬರ, ಮಣಿಗ್ರೀವರು ಶಾಪವಿಮುಕ್ತರಾಗಿ ತಮ್ಮ ನೈಜ ರೂಪವನ್ನು ತಳೆದು ಭಗವಂತನನ್ನು ಸ್ತುತಿಸಿ, ನಮಿಸಿ ತಮ್ಮ ಅಲಕಾನಗರಕ್ಕೆ ಹೊರಟುಹೋದರು.

ಮರಗಳು ಮುರಿದುಬೀಳಲು ಕಾರಣವೇನೆಂದು ನಂದಾದಿಗೋಪಾಲರಿಗೆ ಅರ್ಥವಾಗಲಿಲ್ಲ. ಆಗ ಗೊಲ್ಲ ಬಾಲಕರು ಮುದ್ದುಕೃಷ್ಣನೇ ಮುರಿದು ಹಾಕಿದ್ದೆಂದೂ, ಅವುಗಳಿಂದ ಇಬ್ಬರು ದಿವ್ಯಪುರುಷರು ಹೊರಬಂದು ಬಾಲಕೃಷ್ಣನಿಗೆ ನಮಸ್ಕರಿಸಿ ಹೊರಟು ಹೋದರೆಂದೂ ಹೇಳಿದರು. ಅದನ್ನು ಕೇಳಿ ಎಲ್ಲರೂ ಆಶ್ಚರ್ಯಚಕಿತರಾದರು. ನಂದನು ತನ್ನ ಕಂದನನ್ನು ಒರಳಿನ ಬಂಧನದಿಂದ ಬಿಡಿಸಿದನು. ಹೀಗೆ ಭಗವಂತನು ತನ್ನ ಬಾಲಲೀಲೆಗಳಿಂದ ಗೋಕುಲವಾಸಿಗಳಿಗೆ ಆನಂದಾಶ್ಚರ್ಯಗಳನ್ನು ನೀಡುತ್ತ ಬೆಳೆಯುತ್ತಿದ್ದನು.

### ೩

ಗೋಕುಲದಲ್ಲಿ ಒಂದಿಲ್ಲೊಂದು ದುರ್ಘಟನೆ ನಡೆಯುತ್ತಿರುವುದನ್ನು ಗಮನಿಸಿ ನಂದನು ಇತರ ಹಿರಿಯ ಗೋಪಾಲರೊಡನೆ ಸಮಾಲೋಚನೆ ನಡೆಸಿದನು. ಅವರಲ್ಲಿ ಉಪನಂದನೆಂಬ ಹಿರಿಯನು ಹೇಳಿದನು, "ಗೋಕುಲ ರಾಮ, ಕೃಷ್ಣರಿಗೂ, ನಮಗೂ ಸುರಕ್ಷಿತ ಸ್ಥಳವಲ್ಲವೆಂದು ಭಾಸವಾಗುತ್ತದೆ. ಕೃಷ್ಣನಿಗೆ ಅಪಾಯವನ್ನುಂಟುಮಾಡುವ ಅನೇಕ ಉತ್ಪಾತಗಳು ಇಲ್ಲಿ ನಡೆದಿವೆ. ಆದುದರಿಂದ ನಾವು ಗೋಕುಲವನ್ನು ತೊರೆದು ಸುರಕ್ಷಿತವಾದ ಎಲ್ಲಾದರೂ ಬೇರೆ ಸ್ಥಳಕ್ಕೆ ಹೋಗುವುದು ಕ್ಷೇಮ.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

**ಆತ್ಮಾನಾತ್ಮವಿವೇಚನಂ ಸ್ವನುಭವೋ**
**ಬ್ರಹ್ಮಾತ್ಮನಾ ಸಂಸ್ಥಿತಿಃ**
**ಮುಕ್ತಿರ್ನೋ ಶತಕೋಟಿಜನ್ಮ ಸುಕೃತೈಃ ಪುಣ್ಯೈರ್ವಿನಾ**
**ಲಭ್ಯತೇ ॥**

ಅಂದರೆ ಕರ್ಮತತ್ವದ ಪಾಂಡಿತ್ಯಕ್ಕಿಂತಲೂ ಅಧ್ಯಯನ ಚಿಂತನಾದಿಗಳಿಂದ ಸಂಪಾದಿಸಿದ ಆತ್ಮತತವ ವಿವೇಕವೇ ಮಿಗಿಲು. ಅದಕ್ಕಿಂತಲೂ ಶ್ರೇಷ್ಠವಾದದ್ದು ಆತ್ಮತತ್ವದ ಸಾಕ್ಷಾತ್ಕಾರ. ಪರಮ ಚೈತನ್ಯವೇ ಆಗಿರುವ ಆತ್ಮಸ್ವರೂಪದಲ್ಲಿ ನೆಲೆಗೊಳ್ಳುವುದು ಎಲ್ಲಕ್ಕಿಂತಲೂ ಮಿಗಿಲಾದ ಅತ್ಯಂತ ಶ್ರೇಷ್ಠ ಸಾಧನೆ. ಈ ಮೋಕ್ಷಸಾಧನೆ ಗೈಯಲು ನೂರುಕೋಟಿ ಜನ್ಮಗಳಿಂದ ಸಂಪಾದಿಸಿದ ಪುಣ್ಯರಾಶಿಯೇ ಬೇಕು.

**ಪುಸಕ ಪರಿಚಯ :**

**ಜಗದ್ಗುರು ಶ್ರೀ ಶಂಕರಾಚಾರ್ಯಾಷ್ಟೋತ್ತರ ಶತನಾಮಾವಳಿ, ಪ್ರಕಾಶಕರು : ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನ, ದಕ್ಷಿಣಾಮ್ನಾಯ ಶ್ರೀಶಾರದಾಪೀಠ, ಶೃಂಗೇರಿ - 577 139.**

ಈ ಕೃತಿಯಲ್ಲಿ ಜಗದ್ಗುರು ಶ್ರೀ ಶಂಕರಾಚಾರ್ಯಾಷ್ಟೋತ್ತರ ಶತನಾಮಾವಳಿಯನ್ನು ತಿಳಿಸಲಾಗಿದೆ.

ಅದ್ವೈತ ಸಿದ್ಧಾಂತದ ಪ್ರತಿಪಾದಕರಾದ ಶ್ರೀ ಆದಿಶಂಕರಾಚಾರ್ಯರ ಬಗ್ಗೆ ಕಿರು ಪರಿಚಯವೂ ಈ ಪುಸಕದಲ್ಲಿ ಇದೆ.

1200 ವರ್ಷಗಳ ಹಿಂದೆ ಸನಾತನ ಧರ್ಮವು ವಿಧರ್ಮೀಯರ ದಾಳಿಗೆ ಸಿಲುಕಿ, ಅವಸಾನದ ಅಂಚಿನಲ್ಲಿತ್ತು. ಹಿಂಸೆ-ಕ್ರೌರ್ಯ-ಸಜ್ಜನರ ಪೀಡೆ ಇವು ವಿಜೃಂಭಿಸಿ, ಸಾಂಪ್ರದಾಯಿಕವಾಗಿ ಬಂದ ಸನಾತನ ಧರ್ಮವನ್ನು ಆಚರಿಸುತ್ತಾ ಬಂದವರಿಗೆ ಅನೇಕ ಅಡ್ಡಿ ಆತಂಕಗಳು ಬಂದೊದಗಿದವು. ಇವನ್ನು ತಡೆಗಟ್ಟಿ ಸನಾತನ ಧರ್ಮದ ಪುನರುತ್ಥಾನ ಮಾಡಬೇಕೆಂಬ ಮಹೋದ್ದೇಶದಿಂದ ಪರಮೇಶ್ವರನ ಅವತಾರವು ಕ್ರಿ.ಶ.788ರಲ್ಲಿ ಶ್ರೀ ಶಂಕರ ಭಗವತ್ಪಾದರ ರೂಪದಲ್ಲಾಯಿತು. 32 ವರ್ಷ ಮಾತ್ರ ಬದುಕಿದ ಶ್ರೀ ಶಂಕರ ಭಗವತ್ಪಾದಾಚಾರ್ಯರ ಸಾಧನೆ ಅಸಾಮಾನ್ಯ. ಅವರು ಸಂಚರಿಸುತ್ತಾ ಶೃಂಗೇರಿಗೆ ಬಂದಾಗ ಅವರಿಗೆ ತುಂಗಾನದಿಯ ತಟದಲ್ಲಿ ಒಂದು ಆಶ್ಚರ್ಯಕರವಾದ ದೃಶ್ಯ ಕಂಡಿತು. ಮಧ್ಯಾಹ್ನದ ಸುಡುಬಿಸಿಲಿನ ತಾಪಕ್ಕೆ ಬಳಲುತ್ತಿದ್ದ ಕಪ್ಪೆಗೆ ಸರ್ಪವು ತನ್ನ ಹೆಡೆಯನ್ನು ಬಿಚ್ಚಿ ನೆರಳನ್ನು ಕೊಡುತ್ತಿತ್ತು. ಸ್ವಭಾವತಃ ಪರಮ ವೈರಿಗಳಾದ ಈ ಪ್ರಾಣಿಗಳು ಈ ಪ್ರದೇಶದಲ್ಲಿ ಅತ್ಯಂತ ಸ್ನೇಹ ಭಾವನೆಯಿಂದ ಇರುವುದನ್ನು ನೋಡಿ ಇದು ಪರಮ ಪವಿತ್ರ ಸ್ಥಳವೆಂದು ತಿಳಿದು, ತಮ್ಮ ಪೀಠ ಸ್ಥಾಪನೆಗೆ ಇದು ಯೋಗ್ಯವಾದ ಸ್ಥಾನವೆಂದು ನಿಶ್ಚಯಿಸಿದರು. ಹಾಗೆಯೇ ಪ್ರಪ್ರಥಮವಾಗಿ ದಕ್ಷಿಣಾಮ್ನಾಯ ಶಾರದಾ ಪೀಠವನ್ನು ಸ್ಥಾಪಿಸಿ, ಇಲ್ಲಿಯ ಕಲ್ಲಿನ ಮೇಲೆ ಶ್ರೀ ಚಕ್ರ ಯಂತ್ರೋದ್ಧಾರ ಮಾಡಿ ಶ್ರೀ ಶಾರದಾ ಮಾತೆಯನ್ನು ಪ್ರತಿಷ್ಠಾಪಿಸಿದರು. ಇಲ್ಲಿಯ ಪೀಠಕ್ಕೆ ಅಧಿಪತಿಗಳಾಗಿ ತಮ್ಮ ನಾಲ್ವರು ಶಿಷ್ಯರಲ್ಲಿ ಪ್ರಧಾನರಾಗಿದ್ದ ಶ್ರೀ ಸುರೇಶ್ವರಾಚಾರ್ಯರನ್ನು ನಿಯಮಿಸಿದರು. ಈ ಪೀಠದಲ್ಲಿ ಮೂವತ್ತೈದು ಯತಿಶ್ರೇಷ್ಠರು ಅಧಿಪತಿಗಳಾಗಿದ್ದು ಮೂವತ್ತಾರನೆಯವರಾದ ಈಗಿನ ಅಧಿಪತಿಗಳು ಪರಮಪೂಜ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು. ಇವರ ಅದ್ವಿತೀಯವಾದ ವೇದ-ಶಾಸ್ತ್ರ ಪಾಂಡಿತ್ಯ, ಬಹುಭಾಷಾ ವೈದುಷ್ಯ, ಅಮೋಘವಾದ ವಾಗ್ಮಿತ್ವ, ಶಿಷ್ಯಜನರಲ್ಲಿ ವಾತ್ಸಲ್ಯ, ಪೀಠ ಸಂಪ್ರದಾಯಗಳನ್ನು ಕಟ್ಟೆಚ್ಚರಿಕೆಯಿಂದ ಪಾಲಿಸುತ್ತ ಧಾರ್ಮಿಕ ವಿಧಿಗಳನ್ನು ಸ್ವಲ್ಪವೂ ಲೋಪವಿಲ್ಲದೇ ನಡೆಸುವಿಕೆ ಇವು ಎಂತಹವನನ್ನಾದರೂ ಆಶ್ಚರ್ಯಗೊಳಿಸುತ್ತವೆ.

ಸನಾತನ ಧರ್ಮವನ್ನು ಪ್ರಚಾರಗೊಳಿಸುತ್ತಾ, ಶೃಂಗೇರಿ ಶಾರದಾ ಪೀಠದ ಉಜ್ವಲ ಪರಂಪರೆಯನ್ನು ಕಾಪಾಡಿಕೊಂಡು ಬರುತ್ತಿರುವ ಶ್ರೀ ಶ್ರೀ ಜಗದ್ಗುರು ಭಾರತೀತೀರ್ಥ ಮಹಾಸ್ವಾಮಿಗಳವರು ವಿಶ್ವದ ಉನ್ನತ ಧಾರ್ಮಿಕ ನಾಯಕರಾಗಿ ಸರ್ವಜನವಂದ್ಯರಾಗಿದ್ದಾರೆ.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಲುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ

# ನೇರ ನಡೆ-ನುಡಿ, ನಿರಾಡಂಬರ ವ್ಯಕ್ತಿತ್ವ, ವಾಸ್ತವದ ಕಟು ವಿಮರ್ಶಕ ಮೂಡುಬಿದಿರೆ ಶ್ರೀ ರಾಯಿ ರಾಜಕುಮಾರರಿಗೆ ಸನ್ಮಾನ


ಮೂಡುಬಿದಿರೆ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಪತ್ರಿಕಾ ದಿನಾಚರಣೆಯ ಸಂದರ್ಭದಲ್ಲಿ ಪತ್ರಕರ್ತ, ಕವಿ, ಲೇಖಕ, ಅಂಕಣಕಾರ, ಅಂಚೆಚೀಟಿ-ನಾಣ್ಯ ಸಂಗ್ರಾಹಕ, ಅಧ್ಯಾಪಕ ಶ್ರೀರಾಯಿ ರಾಜಕುಮಾರರನ್ನು ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಎಂ. ಗಣೇಶ ಕಾಮತ್ ಹಾಗೂ ಉಜಿರೆ ಎಸ್.ಡಿ.ಎಂ. ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಭಾಸ್ಕರ ಹೆಗಡೆಯವರು ಎಲ್ಲ ಪತ್ರಕರ್ತರ ಸಮಕ್ಷಮ ಶಾಲು ಹೊದಿಸಿ ಸ್ಮರಣಿಕೆ, ಸನ್ಮಾನ ಪತ್ರ, ಫಲಪುಷ್ಪವಿತ್ತು ಸನ್ಮಾನಿಸಿದರು.

ಹಿರಿಯ ಪತ್ರಕರ್ತರಾದ ಶ್ರೀ ರಾಯಿ ರಾಜಕುಮಾರರ ಲೇಖನ, ಅಂಕಣ, ಬರಹಗಳು ಜಿಲ್ಲೆಯ ವಿವಿಧ ಪತ್ರಿಕೆಗಳಾದ ಸಪ್ತಸಾರ, ಪಿಂಗಾರ, ಜನಬಿಂಬ, ಅನಂತ ಪ್ರಕಾಶ, ಮುಂಗಾರು, ಉದಯವಾಣಿ, ಹೊಸದಿಗಂತ, ಮಂಗಳೂರು ಮಿತ್ರ, ವಿಜಯ ಕರ್ನಾಟಕಗಳಲ್ಲಿ ಆಗಾಗ ಪ್ರಕಟಗೊಂಡಿವೆ. ಪತ್ರಕರ್ತ ರಾಗಿಯೂ, ವರದಿಗಾರರಾಗಿಯೂ ವಿವಿಧ ಪತ್ರಿಕೆಗಳಲ್ಲಿ ದುಡಿಯುತ್ತಿದ್ದಾರೆ.

ಶ್ರೀಯುತರ ವಿಶೇಷ ಅಂಚೆಚೀಟಿ ಹಾಗೂ ನಾಣ್ಯ ಪ್ರದರ್ಶನ ಕಾರ್ಯಾಗಾರ ಮಂಗಳೂರು, ಪುತ್ತೂರು, ಸುಳ್ಯ, ಕಾರ್ಕಳ, ಉಡುಪಿ ಹಾಗೂ ಮೂಡುಬಿದಿರೆಯ ಹಲವಾರು ಕಡೆ ನಡೆದು ವಿದ್ಯಾರ್ಥಿಗಳೊಂದಿಗೆ, ಅಧ್ಯಾಪಕರೂ, ಸಾರ್ವಜನಿಕರೂ ಮಾಹಿತಿ ಪಡೆದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಈಗಾಗಲೇ 42 ಕಡೆ ಪ್ರದರ್ಶನ ಕಾರ್ಯಾಗಾರ ನಡೆಸಿಕೊಟ್ಟಿದ್ದಾರೆ ಹಾಗೂ ಈಗಲೂ ಮುಂದುವರೆಸುತ್ತಿದ್ದಾರೆ.

ಸುಮಾರು ಹದಿನೇಳು ವರ್ಷಗಳ ಕಾಲ ಇವರು ನಡೆಸಿದ ಉಚಿತ ಹಿಂದೀ ಭಾಷಾ ಪರೀಕ್ಷಾ ಮಾರ್ಗದರ್ಶನದಿಂದ ಹಲವಾರು ವಿದ್ಯಾರ್ಥಿಗಳು ರಾಜ್ಯಮಟ್ಟದ ರ್‍ಯಾಂಕ್ ವಿಜೇತರಾಗಿದ್ದು ಹಲವಾರು ವಿದ್ಯಾಲಯಗಳಲ್ಲಿ ಅಧ್ಯಾಪಕರಾಗಿ, ಉಪನ್ಯಾಸಕರಾಗಿ ಹಾಗೂ ಇತರ ಇಲಾಖೆಗಳಲ್ಲಿ ದುಡಿಯುವಂತೆ ಮಾಡಿದ್ದು ಇವರ ಸಮಾಜೋಪಯೋಗಿ ಕಾರ್ಯಕ್ಕೊಂದು ಉದಾಹರಣೆ. ಇದಕ್ಕಾಗಿ 2004ರಲ್ಲಿ ಬೆಂಗಳೂರು ಸಿಲಿಕಾನ್ ಜೇಸೀಯವರು ಇವರನ್ನು ಸನ್ಮಾನಿಸಿದ್ದರು. 2007ರಲ್ಲಿ ಬೆಳ್ತಂಗಡಿ ಲಯನ್ಸ್ ಕ್ಲಬ್‌ನ ಮೂರನೇ ವಲಯ ಸಮಾವೇಶದಲ್ಲಿ ಸನ್ಮಾನಿಸಿದ್ದರು. ಅದಕ್ಕೂ ಮೊದಲು ದ.ಕ.ಜಿಲ್ಲಾ ಚುಟುಕು ಸಮ್ಮೇಳನದಲ್ಲಿಯೂ ಇವರನ್ನು ಸನ್ಮಾನಿಸಿದ್ದರು. ಹಲವಾರು ಕವಿಗೋಷ್ಠಿಗಳಲ್ಲಿ ಭಾಗವಹಿಸಿ, ಕವನ ವಾಚನ ಗೈದಿದ್ದಾರೆ. ಇದೀಗ ಕಳೆದ ಮೂರು ವರ್ಷಗಳಿಂದ ಗ್ರಾಹಕ ಜಾಗೃತಿ ಶಿಕ್ಷಣದ ಸಂಪನ್ಮೂಲ ವ್ಯಕ್ತಿಯಾಗಿಯೂ, ಕಳೆದ ಹಲವಾರು ವರ್ಷಗಳಿಂದ ಹಿಂದಿ ಭಾಷಾ ಸಂಪನ್ಮೂಲ ವ್ಯಕ್ತಿಯಾಗಿಯೂ ಹೆಸರುವಾಸಿಯಾಗಿದ್ದಾರೆ. ಇಂತಹ ಬಹುಮುಖ ಪ್ರತಿಭೆಯ ವ್ಯಕ್ತಿ ನಮ್ಮ ಸಮಾಜಕ್ಕೊಂದು ಹೆಮ್ಮೆ.

# ಯುವ ಪ್ರತಿಭೆ - ಸ್ವರೂಪ್‌ರಾವ್



ಪ್ರಾಥಮಿಕದಿಂದ ಪ್ರೌಢಶಾಲೆಯವರೆಗೆ ಎಲ್ಲಿ ನೋಡಿದರಲ್ಲಿ ಪ್ರತಿಭಾ ಕಾರಂಜಿ ಪುಟಿಯುತ್ತಿದೆ. ಸರಕಾರದ ಈ ಕಾರ್ಯಕ್ರಮ ತಕ್ಕಮಟ್ಟಿಗೆ ನೂರಾರು ಸಾವಿರಾರು ಪುಟಾಣಿಗಳಲ್ಲಿರುವ ಸುಪ್ತ ಪ್ರತಿಭೆಯನ್ನು ಹೊರಹೊಮ್ಮಿಸುತ್ತಿದೆ. ಇದು ಸಾಮಾಜಿಕ ಮಟ್ಟದಲ್ಲಿ ನಡೆಯುತ್ತಿರುವ ಒಂದು ಸಾಮೂಹಿಕ ಪ್ರಯೋಗ. ಈ ಸ್ಪರ್ಧೆಯ ಜಾಡಿನಿಂದ ದೂರವಾಗಿ ಸಾಮಾಜಿಕ ಸೇವಾ ಸಂಘಟನೆಗಳಲ್ಲಿ ತೊಡಗಿಸಿಕೊಂಡು ಮೌನವಾಗಿ ಕೆಲಸ ಮಾಡುತ್ತಿರುವ ಯುವ ಪ್ರತಿಭೆಗಳನ್ನು ಗುರುತಿಸುವ ಕೆಲಸವೂ ವ್ಯಯಕ್ತಿಕ ವಿಕಸನದಲ್ಲಿ ಮಹತ್ವದ್ದಾಗುತ್ತದೆ.

ಅಂತಹ ಪ್ರತಿಭೆಗಳಲ್ಲೊಂದು ಎಲ್ಲೂರು ಸ್ವರೂಪ್‌ರಾವ್. ಅಂತಾರಾಷ್ಟ್ರೀಯ ಸೇವಾ ಸಂಸ್ಥೆ ರೋಟರಿ ಇಂಟರ್‌ನ್ಯಾಶನಲ್‌ನ ಯುವದಳ ರೊಟರ್‍ಯಾಕ್ಟ್. ಯುವಶಕ್ತಿಯನ್ನು ಸೇವಾ ಕಾರ್ಯದತ್ತ ಪ್ರೇರೇಪಿಸುವ ರೋಟರ್‍ಯಾಕ್ಟ್ ನಗರ ಪ್ರದೇಶಗಳ ವಿದ್ಯಾಸಂಸ್ಥೆಗಳ ಉತ್ಸಾಹಿ ಯುವಕರನ್ನು ಗುರಿಯಾಗಿಟ್ಟು ಕೆಲಸ ಮಾಡುತ್ತಿದೆ. ಬೆಂಗಳೂರಿನ ಪ್ರತಿಷ್ಠಿತ ತಾಂತ್ರಿಕ ವಿದ್ಯಾಸಂಸ್ಥೆ ಆರ್.ವಿ.ಕಾಲೇಜ್ ಆಫ್ ಇಂಜಿನಿಯರಿಂಗ್‌ನಲ್ಲಿ 3ನೇ ವರ್ಷದ ಇಂಜಿನಿಯರಿಂಗ್ ಶಿಕ್ಷಣವನ್ನು ಪೂರೈಸಿರುವ ಸ್ವರೂಪ್‌ರಾವ್ RVCE ಕಾಲೇಜ್ ರೋಟರ್‍ಯಾಕ್ಟ್ ಕ್ಲಬ್‌ನ ಸದಸ್ಯ. ವರ್ಷ 2008-09ನೇ ಸಾಲಿನ ಅಧ್ಯಕ್ಷ, ಅಲ್ಲದೆ ರೋಟರಿ ಜಿಲ್ಲೆ 3190ರ ಕ್ಲಬ್ ಸರ್ವಿಸಸ್‌ನ ಜಿಲ್ಲಾ ನಿರ್ದೇಶಕ.

ತನ್ನ ಅವಧಿಯಲ್ಲಿ 28 ಕಾರ್ಯಕ್ರಮಗಳನ್ನು ಆಯೋಜಿಸಿದ ಸ್ವರೂಪ್‌ರಾವ್ ಹಾಗೂ ತಂಡ RVCEಯಲ್ಲಿ ಫೆಬ್ರವರಿ 28 ಹಾಗೂ ಮಾರ್ಚ್ 1ರಂದು ಆಯೋಜಿಸಿದ್ದ ರೋಟರ್‍ಯಾಕ್ಟ್ ಸಮಾವೇಶದ ಯಶಸ್ಸಿನಿಂದ ರೋಟರಿ ಸಂಸ್ಥೆಯ ಗಣ್ಯರ ಗಮನ ಸೆಳೆಯಿತು. ಈ ಸಮಾವೇಶಕ್ಕೆ ಲೋಕಾಯುಕ್ತ ಶ್ರೀಯುತ ಸಂತೋಷ್ ಹೆಗ್ಡೆ, ಸಂಸತ್ ಸದಸ್ಯ ರಾಜೀವ್ ಚಂದ್ರಶೇಖರ್ ಹಾಗೂ ಅನೇಕ ಗಣ್ಯರು ಮುಖ್ಯ ಅತಿಥಿಗಳಾಗಿ ಆಗಮಿಸಿ RVCE ರೋಟರ್‍ಯಾಕ್ಟ್‌ನ ಕಾರ್ಯಕ್ಷಮತೆಯನ್ನು ಪ್ರಶಂಸಿಸಿದರು. RVCEಯಲ್ಲಿ ಆಯೋಜಿಸಿದ್ದ ಒಂದು ರಕ್ತದಾನ ಶಿಬಿರದಲ್ಲಿ 785 ಯುನಿಟ್‌ನಷ್ಟು ರಕ್ತ ಸಂಗ್ರಹವಾಗಿ ದಾಖಲೆಯಾಯಿತು.

ಸ್ವರೂಪ್‌ರಾವ್ ಪ್ರದರ್ಶಿಸಿದ ದೂರದರ್ಶಿತ್ವ ಹಾಗೂ ಕ್ಲಬ್ ಚಟುವಟಿಕೆಗಳಲ್ಲಿ ನೀಡಿದ ನಾಯಕತ್ವ RVCE ಕಾಲೇಜ್ ರೋಟರ್‍ಯಾಕ್ಟ್ ಕ್ಲಬ್ ವರ್ಷ 2008-09ನೇ ಸಾಲಿನಲ್ಲಿ 8 ಪ್ರಶಸ್ತಿಗಳನ್ನು ಗಳಿಸಲು ಕಾರಣವಾಗಿದೆ. ಇದರಲ್ಲಿ 4 ವೈಯಕ್ತಿಕ ಪ್ರಶಸ್ತಿಗಳು ಹಾಗೂ 4 ತಂಡಕ್ಕೆ ಬಂದ ಪ್ರಶಸ್ತಿಗಳು.

ರೋಟರಿ ಇಂಟರ್‌ನ್ಯಾಶನಲ್ ಸೈಟೇಶನ್, ಡಿಸ್ಟ್ರಿಕ್ಟ್ ಗವರ್ನರ್ ಸೈಟೇಶನ್, ಡಿಆರ್‌ಆರ್'ಸ್ ಸೈಟೇಶನ್, ಬೆಸ್ಟ್ ಪ್ರೆಸಿಡೆಂಟ್-ಸೆಕ್ರೆಟರಿ ಟೀಮ್, ಬೆಸ್ಟ್ ರೋಟರ್‍ಯಾಕ್ಟರ್, ಅತ್ಯುತ್ತಮ ಕಾರ್ಯಕ್ರಮ, ಉನ್ನತ ಸದಸ್ಯ ಸಂಖ್ಯೆ ಮತ್ತು ಬೆಳವಣಿಗೆ, ಸಕಾಲದ ಉತ್ತಮ ವರದಿ ಇವು ಸ್ವರೂಪ್ ಹಾಗೂ ತಂಡಕ್ಕೆ ಸಿಕ್ಕ ಪ್ರಶಸ್ತಿಗಳು. 2009ರ ಜೂನ್ 28ರಂದು ಬೆಂಗಳೂರಿನಲ್ಲಿ ನಡೆದ ರೋಟರ್‍ಯಾಕ್ಟ್ 3190ರ ಜಿಲ್ಲಾ ಪ್ರಶಸ್ತಿ ಸಮ್ಮೇಳನದಲ್ಲಿ ರೋಟರಿ ಜಿಲ್ಲಾಧ್ಯಕ್ಷ ರೊ. ಯು.ಬಿ.ಭಟ್ ಅವರಿಂದ ಸ್ವರೂಪ್ ಹಾಗೂ ಬಳಗ ಈ ಪ್ರಶಸ್ತಿಗಳನ್ನು ಸ್ವೀಕರಿಸಿತು.

ಕೀರ್ತಿ ಕಿರೀಟಕ್ಕೆ ಗರಿ ಎಂಬಂತೆ ವರ್ಷ 2009-2010ನೇ ಸಾಲಿನ ರೊಟರಿ ಜಿಲ್ಲೆ 3190ರ ಝೋನಲ್ ರೋಟರ್‍ಯಾಕ್ಟ್ ಪ್ರತಿನಿಧಿಯಾಗಿ ಸ್ವರೂಪ್ ರಾವ್ ಆಯ್ಕೆಯಾಗಿದ್ದಾರೆ. ಉತ್ತಮ ಚಿತ್ರಕಾರ ಹಾಗೂ ಕ್ರಿಕೆಟ್ ಆಲ್‌ರೌಂಡರ್ ಕೂಡ ಆಗಿರುವ ಸ್ವರೂಪ್ KSFC ಉಡುಪಿ ಶಾಖೆಯಲ್ಲಿ ಅಧಿಕಾರಿಯಾಗಿರುವ ಎಲ್ಲೂರು ಮುರಳಿಕೃಷ್ಣರಾವ್ ಹಾಗೂ BSNL ಉದ್ಯೋಗಿಯಾಗಿರುವ ಶ್ರೀಮತಿ ಜಯಲಕ್ಷ್ಮೀಯವರ ಪುತ್ರ. ಕುಂಜಿಬೆಟ್ಟು ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಕ್ರಿಕೆಟ್ ತಂಡದ ಪರವಾಗಿ ಅನೇಕ ಬಾರಿ ಆಡಿ ಕ್ರೀಡಾ ಸ್ಫೂರ್ತಿಯನ್ನು ಪ್ರದರ್ಶಿಸಿರುವ ಸ್ವರೂಪ್‌ರಾವ್ ಸಾಧನೆಯ ದಾರಿಯಲ್ಲಿ ಶ್ರೀಶಾರದಾ ಹೊಸ ಬೆಳಕನ್ನು ಹಾರೈಸುತ್ತದೆ.

## ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾ-ಮಹಿಳಾ ಘಟಕ, ಮೈಸೂರು

ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾದ ಮಹಿಳಾ ವಿಭಾಗ, ಮೈಸೂರು ಇದರ ಸಭೆಯು ತಾ.19-07-2009ರಂದು ಮಹಿಳಾ ಸಂಘದ ಅಧ್ಯಕ್ಷರಾದ ಶ್ರೀಮತಿ ರಮಾವಾಣಿ ಚಂದ್ರಶೇಖರ್ ರಾವ್ ತಾಳಿಪ್ಪಾಡಿಯವರ ಮನೆಯಲ್ಲಿ ಜರುಗಿತು. ಈ ಕಾರ್ಯಕ್ರಮದಲ್ಲಿ ಸುಮಾರು 70 ಮಂದಿ ಮಹಿಳೆಯರು ಹಾಗೂ ಮಹನೀಯರು ಭಾಗವಹಿಸಿದರು. ಶ್ರೀಮತಿ ರಮಾವಾಣಿಯವರ ಪ್ರಾರ್ಥನೆ ಹಾಗೂ ಸ್ವಾಗತಭಾಷಣದೊಂದಿಗೆ ಸಭೆಯು ಪ್ರಾರಂಭವಾಯಿತು. ಶ್ರೀಮತಿ ಲಕ್ಷ್ಮೀನಟರಾಜ್ ಮತ್ತು ಬಳಗ ಇವರಿಂದ ಧ್ಯಾನ-ಅನಾಪಾನಸತಿ ಧ್ಯಾನದ ಬಗ್ಗೆ ತರಗತಿ ಹಾಗೂ ತರಬೇತಿ ಕಾರ್ಯಕ್ರಮವನ್ನು ಶ್ರೀಮತಿ ರಮಾವಾಣಿ ಟಿ.ಸಿ.ರಾವ್‌ರವರು ಏರ್ಪಡಿಸಿದ್ದರು. ದೈನಂದಿನ ಜೀವನದಲ್ಲಿ ಈ ಧ್ಯಾನದ (MEDITATION) ಸದುಪಯೋಗ ಪಡೆದುಕೊಳ್ಳಬೇಕೆಂಬುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು ಹಾಗೂ ಈ ಉದ್ದೇಶ ಫಲಪ್ರದವಾಯಿತು. ಸಂಜೆ ಅಲ್ಲಿ ನೆರೆದಿದ್ದ ಪುರುಷರಿಗೆ ಶ್ರೀಯುತ ನಟರಾಜ್‌ರವರು ಧ್ಯಾನದಿಂದ ಆಗುವ ಉಪಯೋಗವನ್ನು ತಿಳಿಸಿ, ಧ್ಯಾನದ ಬಗ್ಗೆ ತರಬೇತಿ ನೀಡಿದರು. ಅನಂತರ ಶ್ರೀಮತಿ ರಮಾವಾಣಿಯವರು ಮನೆ ಔಷಧಿಯಲ್ಲಿ ಮುಖ್ಯವಾಗಿ ಶುಂಠಿಯನ್ನು ಉಪಯೋಗಿಸುವುದರಿಂದ ಆಗುವ ಹಲವು ರೀತಿಯ ರೋಗ ಶಮನದ ಬಗ್ಗೆ ತಿಳಿಸಿದರು. ಕಾರ್ಯದರ್ಶಿ ಶ್ರೀಮತಿ ಲತಾರಾಮಮೂರ್ತಿ ಹಾಗೂ ಸಹಕಾರ್ಯದರ್ಶಿ ಶ್ರೀಮತಿ ಗಾಯತ್ರಿ ಜಗದೀಶ್ ಹಾಗೂ ಎಲ್ಲಾ ಸದಸ್ಯರ ಪೂರ್ಣ ಸಹಕಾರದಿಂದ ಮಹಿಳಾ ವಿಭಾಗದ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಉಪಹಾರದ ಬಳಿಕ ಧನ್ಯವಾದದೊಂದಿಗೆ ಅಂದಿನ ಕಾರ್ಯಕ್ರಮವು ಮುಕ್ತಾಯಗೊಂಡಿತು.

## ಟಿ. ಬಿ. ಶ್ರೀನಿವಾಸಯ್ಯ



**04-10-1929ರಿಂದ 09-08-2009**

ಪುತ್ತೂರು ತಾಲೂಕು ತಾಳಿಪಾಡಿಯವರಾದ ಮಣಿಪಾಲ ಅನಂತನಗರ ನಿವಾಸಿ ತಾಳಿಪಾಡಿ ಭಾಗವತ ಶ್ರೀನಿವಾಸಯ್ಯನವರು ತಾ.09-08-2009ರಂದು ಅಪರಾಹ್ನ ತೀವ್ರ ಅಸೌಖ್ಯದಿಂದ ದೈವಾಧೀನರಾದರು. ನಿಧನ ಕಾಲಕ್ಕೆ ಅವರಿಗೆ 80 ವರ್ಷ ವಯಸ್ಸಾಗಿತ್ತು.

ಸಿಂಡಿಕೇಟ್ ಬ್ಯಾಂಕಿನ ಕಾರ್ಮಿಕ ವಿಭಾಗದಲ್ಲಿ ಪ್ರಬಂಧಕರಾಗಿದ್ದು 1987ರಲ್ಲಿ ನಿವೃತ್ತರಾಗಿದ್ದ ದಿವಂಗತರು ಮಣಿಪಾಲ ಅನಂತನಗರದಲ್ಲಿ ನಿವೃತ್ತ ಜೀವನ ನಡೆಸುತ್ತಿದ್ದರು. ಅಲ್ಪಕಾಲದ ಅಸ್ವಾಸ್ಥ್ಯದಿಂದ ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ಚೇತರಿಸಲಾಗದೆ ದೈವಾಧೀನರಾದರು.

ಇಬ್ಬರು ಗಂಡು ಮಕ್ಕಳು, ಮೂವರು ಪುತ್ರಿಯರನ್ನು, ಅಪಾರ ಬಂಧು ಬಳಗವನ್ನು ಅಗಲಿರುವ ಶ್ರೀನಿವಾಸಯ್ಯನವರು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಗೌರವಾಧ್ಯಕ್ಷ ಶ್ರೀ ಅಂಬಲಪಾಡಿ ಕೃಷ್ಣರಾಯರ ಸಮೀಪದ ಬಂಧುವೂ, ದೀರ್ಘಕಾಲದ ಒಡನಾಡಿಯೂ ಆಗಿದ್ದರು. ತಾಂತ್ರಿಕ ವಿದ್ಯಾಭ್ಯಾಸ (Automobile Engg.) ಪಡೆಯುತ್ತಿದ್ದಾಗ ನಮ್ಮ ಸಂಘದ ನಿಕಟಪೂರ್ವ ಅಧ್ಯಕ್ಷ ಶ್ರೀ ಎಂ.ಪಾಲಚಂದ್ರರಾಯರ ಕಾಲೇಜು ಮತ್ತು ಹಾಸ್ಟೆಲ್ ಜೀವನದ ಒಡನಾಡಿಯಾಗಿದ್ದರು.

## ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ
## ಉದಯಚಂದ್ರ ಪ್ರತಿಭಾ ಪುರಸ್ಕಾರ 2008-09

ಸಂಘದ ಯುವವೇದಿಕೆಯ ಆಶ್ರಯದಲ್ಲಿ ನಮ್ಮ ಸಮಾಜದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಉದಯಚಂದ್ರ ಸ್ಮಾರಕ ಪುರಸ್ಕಾರ ನೀಡಿ ಪುರಸ್ಕರಿಸಲು ನಿಶ್ಚಯಿಸಲಾಗಿದೆ. 2008-09ನೇ ಸಾಲಿನ ಎಸ್.ಎಸ್.ಎಲ್.ಸಿ., ಪದವಿಪೂರ್ವ (ಮೂರು ವಿಭಾಗ) ತರಗತಿಗಳ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಮತ್ತು ಪದವಿ, ಸ್ನಾತಕೋತ್ತರ, ವೈದ್ಯಕೀಯ, ಕಾನೂನು, ಇಂಜಿನಿಯರಿಂಗ್‌ಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಆದ್ದರಿಂದ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು 25-09-2008ರ ಒಳಗೆ ಅಂಕಪಟ್ಟಿಯ ಪ್ರತಿ ಮತ್ತು ಇತರ ಮಾಹಿತಿಯೊಂದಿಗೆ ಅರ್ಜಿ ಕಳುಹಿಸಿ ಕೊಡಬೇಕು. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿಯೂ 80%*ಕ್ಕಿಂತ ಹೆಚ್ಚು ಅಂಕಗಳಿಸಿದವರು ಮಾತ್ರ ಅರ್ಜಿ ಕಳುಹಿಸುವುದು. ಪದವಿ ಮತ್ತು ಇತರ ವಿಭಾಗಗಳಲ್ಲಿ ರ್‍ಯಾಂಕ್ ಗಳಿಸಿದ ಬಗ್ಗೆ ಅಧಿಕೃತ ದಾಖಲೆಗಳನ್ನು ಕಳುಹಿಸಬೇಕು.

ಅರ್ಜಿಯನ್ನು "ಸಂಚಾಲಕರು, ಯುವವೇದಿಕೆ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು ಉಡುಪಿ - 576 102" ಇಲ್ಲಿಗೆ ಕಳುಹಿಸಬೇಕು. **ಅರ್ಜಿಯಲ್ಲಿ ಅವಶ್ಯವಾಗಿ ತಮ್ಮ ದೂರವಾಣಿ ಸಂಖ್ಯೆಯನ್ನು ನಮೂದಿಸಬೇಕು.** ವಿಜಯದಶಮಿಯಂದು ಸಂಜೆ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು.

**- ಸಂಚಾಲಕರು, ಯುವವೇದಿಕೆ.**

*(ಎಸ್‌ಎಸ್‌ಎಲ್‌ಸಿ. ಹಾಗೂ ಪಿಯುಸಿ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ಒಬ್ಬೊಬ್ಬರಿಗೆ ಮಾತ್ರ ಪುರಸ್ಕಾರ ನೀಡಲಾಗುವುದು. ಪದವಿ ಹಾಗೂ ಇತರ ವಿಭಾಗಗಳಲ್ಲಿ ರ್‍ಯಾಂಕ್ ವಿಜೇತರಿಗೆ ಮಾತ್ರ ಪುರಸ್ಕಾರವಿದೆ.)

**PRAMOD**
AUTOMOBILES
KARANGALPADY, MANGALORE - 575 003.
Ph : 2491723 (O)
2493633 (H.O.)
2212723 (R)
: Wholesale & Retail Dealers in :
2 & 3 WHEELERS SPARES & ACCESSORIES
Prop. : Ln.K. HARSHA KUMAR



## ಶ್ರೀಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ-576 102

ಶಾರದಾ ಶಾರದಾಂಭೋಜವದನಾ ವದನಾಂಬುಜೇ ।
ಸರ್ವದಾಸರ್ವದಾಽಸ್ಮಾಕಂ ಸನ್ನಿಧಿಂ ಸನ್ನಿಧಿಂ ಕ್ರಿಯಾತ್ ॥

## ಶ್ರೀಶಾರದಾ ದೇವಸ್ಥಾನದಲ್ಲಿ ನವರಾತ್ರಿ ವಿಶೇಷ ಪೂಜೆಗಳು

ತಾ.19-09-2009ರಿಂದ 28-09-2009ರ ವರೆಗೆ ನವರಾತ್ರಿಯ ಪ್ರತಿದಿನ ಶ್ರೀ ದೇವಸ್ಥಾನದಲ್ಲಿ ಮಧ್ಯಾಹ್ನ 12-30ಕ್ಕೆ ಹಾಗೂ ರಾತ್ರಿ 8-30ಕ್ಕೆ ವಿಶೇಷ ಪೂಜೆ ನಡೆಯಲಿರುವುದು.
ಭಕ್ತಾದಿಗಳು ಪ್ರತಿದಿನ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ವಿನಂತಿ

- ಆಡಳಿತ ಮಂಡಳಿ


# ದಾಯಾದಿ ಕಲಹದ ಬೀಜಾಂಕುರವಾಯಿತು

## (ಪೌರಾಣಿಕ ಕಥೆ)



- ವೈ. ಶಂಕರನಾರಾಯಣ ರಾವ್, ಪಡುಬಿದ್ರಿ

ಭರತವಂಶವನ್ನು ಸ್ಥಿರಗೊಳಿಸುವ ಪ್ರಬಲ ಅಪೇಕ್ಷೆಯಿಂದ ಗಾಂಗೇಯ ಭೀಷ್ಮರು ಧೃತರಾಷ್ಟ್ರನಿಗೆ ಗಾಂಧಾರ ದೇಶದ ರಾಜಕುವರಿ ಗಾಂಧಾರಿಯನ್ನು ಕುಲವಧುವಾಗಿ ತಂದುಕೊಂಡರು. ಕೆಲ ಸಮಯ ಕಳೆದ ಮೇಲೆ ಪಾಂಡುವಿಗೆ ಕುಂತೀ ಭೋಜನ ಪುತ್ರಿ ಕುಂತಿಯನ್ನೂ ಮದ್ರೇಶ್ವರನ ಮಗಳಾದ ಮಾದ್ರಿಯನ್ನೂ ದ್ವಿಪತ್ನಿಯರನ್ನಾಗಿ ವಿವಾಹ ನೆರವೇರಿಸಿಕೊಟ್ಟರು. ಹಿರಿಯವನಾದ ಧೃತರಾಷ್ಟ್ರನು ಹುಟ್ಟುಕುರುಡನಾಗಿದ್ದುದರಿಂದ ರಾಜ್ಯಭಾರವನ್ನು ನೇರ್ಪುಗೊಳಿಸುವ ಘನ ಉದ್ದೇಶದಿಂದ ಭೀಷ್ಮರು ಈ ವಿವಾಹ ಸಮಾರಂಭದೊಡನೆಯೇ ಸರ್ವಸಮ್ಮತಿಯಿಂದ ಪಾಂಡುವಿಗೆ ಪಟ್ಟಾಭಿಷೇಕವನ್ನೂ ವಿಜ್ರಂಭಣೆಯಿಂದ ಸಂಪನ್ನಗೊಳಿಸಿದರು.

ಮುಂದೆ ಹಲವು ಕಾಲ ರಾಜವಂಶದಲ್ಲಿ ಮಕ್ಕಳು ಜನಿಸದಿರಲು ತಮ್ಮ ವಂಶವು ಅಳಿದೇ ಹೋಗುವುದೇನೋ ಎಂಬ ಚಿಂತೆಯಿಂದ ಧೃತರಾಷ್ಟ್ರನು ಅನುದಿನವೂ ಮಹರ್ಷಿ ವೇದವ್ಯಾಸರನ್ನು ಧ್ಯಾನಿಸುತ್ತಿದ್ದನು. ಒಂದು ದಿನ ವೇದವ್ಯಾಸರು ಅರಮನೆಗೆ ಆಗಮಿಸಿ ಅವನನ್ನು ಸಂತೈಸಿ ಗಾಂಧಾರಿಯು ಗರ್ಭಧರಿಸುವಂತೆ ಮಂತ್ರ ಪಿಂಡಕವನ್ನು ಅನುಗ್ರಹಿಸಿ ಗರ್ಭಧಾರಣೆಯಾದ ಅನಂತರ ತಮ್ಮ ಆಶ್ರಮಕ್ಕೆ ತೆರಳಿದರು.

ಅದೊಂದು ದಿನ ಬೇಟೆಗಾರರ ಬೇಡಿಕೆಗೆ ಮಣಿದು ಪಾಂಡುರಾಜನು ಮೃಗಯಾ ವಿಹಾರಕ್ಕೆಂದು ಕಾನನವನ್ನು ಪ್ರವೇಶಿಸಿದನು. ಕಾನನದ ಗುಹ್ಯ ತಾವೊಂದರಲ್ಲಿ ಕ್ರೀಡಿಸುತ್ತಿದ್ದ ಮೃಗ ಮಿಥುನವನ್ನು ಅರಸನು ಕಂಡನು. ಅವು ಹರಿಣಗಳ ಜೋಡಿಯೆಂದೇ ಪರಿಭಾವಿಸಿದ ಅರಸನು ಏಕ ಶರದಿಂದ ಮೃಗರೂಪದಲ್ಲಿದ್ದ ಮುನಿದಂಪತಿಗಳನ್ನು ಘಾಸಿಗೊಳಿಸಿದನು. ಮೃತ್ಯು ಸಮ್ಮುಖದಲ್ಲಿದ್ದ ಮುನಿಪನು ''ಎಲೆ ರಾಜನೇ, ನನ್ನ ಸತಿಯೊಂದಿಗೆ ರಮಿಸುತ್ತಿದ್ದ ಸುಖದ ವೇಳೆಯಲ್ಲಿಯೇ ನೀನು ನಮ್ಮಿಬ್ಬರನ್ನೂ ಕೊಂದೆ. ನಿನ್ನ ಪತ್ನಿಯನ್ನು ನೀನು ಕೂಡಿದಾಗಲೇ ನಿನಗೆ ಮರಣ ಬಂದೊದಗಲಿ'' ಎಂದು ತಮ್ಮಿಬ್ಬರ ಅವಸಾನದ ಮುನ್ನ ಶಪಿಸಿದನು. ದುಃಖಿತನಾದ ಪಾಂಡುವು ರಾಜ್ಯಭಾರವನ್ನು ಭೀಷ್ಮ, ಧೃತರಾಷ್ಟ್ರರಿಗೆ ಒಪ್ಪಿಸಿ ತನ್ನಿಂದಾದ ಪಾಪ ಪರಿಹಾರಕ್ಕಾಗಿ ಮುನಿಜನರೊಂದಿಗಿದ್ದು ಧ್ಯಾನ-ಯೋಗಾದಿಗಳನ್ನು ಕೈಗೊಳ್ಳಲು ತನ್ನ ಪತ್ನಿಯರೊಂದಿಗೆ ವನವನ್ನು ಸೇರಿದನು.

ಗಾಂಧಾರಿಯು ಗರ್ಭಧರಿಸಿದುದನ್ನು ಕೇಳಿ ಚಿಂತಾಕುಲಳಾದ ಕುಂತಿಯು ತನಗೆ ಬಾಲ್ಯದಲ್ಲಿ ದೂರ್ವಾಸ ಮುನಿಯಿಂದ ಸಂತಾನವನ್ನು ಪಡೆಯುವ ಮಂತ್ರೋಪದೇಶವಾಗಿರುವುದನ್ನು ನೆನಪಿಸಿಕೊಂಡಳು. ಪಾಂಡುವಿನ ಅನುಮತಿಯಿಂದ ಮಂತ್ರವನ್ನು ಪಠಿಸಿ ಯಮನಿಂದ ಅನುಗ್ರಹೀತಳಾದ ಆಕೆ ಗರ್ಭವತಿಯಾಗಿ ನವಮಾಸದ ಬಳಿಕ ಯುಧಿಷ್ಠಿರ (ಧರ್ಮರಾಯ)ನನ್ನು ಪಡೆದಳು.

ಅತ್ತ ಹಸ್ತಿನಾವತಿಯಲ್ಲಿ ಗರ್ಭಧರಿಸಿ ಎರಡು ವರ್ಷಗಳಾದರೂ ಗಾಂಧಾರಿಯು ಮಗುವನ್ನು ಹಡೆಯಲಿಲ್ಲ. ಕುಂತಿಯು ಮಂತ್ರ ಸಿದ್ಧಿಯಿಂದ ತನಗಿಂತ ಮೊದಲೇ ಮಗುವನ್ನು ಪಡೆದುದನ್ನು ತಿಳಿದು ಆಕೆ ಈರ್ಷೆಯಿಂದ ತನ್ನ ಬಸುರನ್ನು ಚೆನ್ನಾಗಿ ಹಿಸುಕಿಕೊಂಡಳು. ಕೂಡಲೇ ಅವಳಿಗೆ ಗರ್ಭಸ್ರಾವವಾಗಿ ನೆತ್ತರಿನಿಂದ ತೊಯ್ದ ನೂರೊಂದು ಮಾಂಸದ ತುಣುಕುಗಳು ಧರಣಿಗೆ ಉರುಳಿದವು. ಅಲ್ಲಿಗೆ ಆಗಮಿಸಿದ ವೇದವ್ಯಾಸರು ಆ ಪಿಂಡದ ತುಣುಕುಗಳನ್ನು ತುಪ್ಪದಿಂದ ತುಂಬಿದ ಕೊಪ್ಪರಿಗೆಗಳಲ್ಲಿ ಒಂದೊಂದಾಗಿ ಸಂಗ್ರಹಿಸಿ ಆ ನೂರೊಂದು ಕೊಪ್ಪರಿಗೆಗಳನ್ನು ನೂರು ದಿನಗಳ ವರೆಗೆ ಸಂರಕ್ಷಿಸುವಂತೆ ತಿಳಿಸಿದರು. ಕಾಂತಾರದಲ್ಲಿ ಇನ್ನೊಂದು ಮಂತ್ರವನ್ನು ಪಠಿಸಿ ವಾಯುವನ್ನು ಸಾಕ್ಷಾತ್ಕರಿಸಿ ಗರ್ಭವತಿಯಾಗಿದ್ದ ಕುಂತಿಯು ತನ್ನ ಇನ್ನೊಬ್ಬ ಪುತ್ರ ಭೀಮನನ್ನು ಹಡೆದಳು. ಅದೇ ರಾತ್ರಿ ಕೊಪ್ಪರಿಗೆಯಿಂದ ದುರ್ಯೋಧನನು ಜನಿಸಿದನು. ಉಳಿದ ಕೊಪ್ಪರಿಗೆಗಳಿಂದ ದುಶ್ಶಾಸನಾದಿ 99 ಮಂದಿ ಕೌರವ ಪುತ್ರರೂ ದುಸ್ಸಳೆಯೆಂಬ ಪುತ್ರಿಯೂ ಜನಿಸಿದರು. ಈ ಶಿಶುಗಳಲ್ಲಿ 19ನೆಯದಾಗಿ ಜನಿಸಿದ ಶಿಶುವು ತನ್ನ ಮುದ್ದು ಸುರಿಯುವ ಸಲ್ಲಕ್ಷಣಗಳಿಂದಾಗಿ ಎಲ್ಲರಿಗೂ ಅಚ್ಚುಮೆಚ್ಚಿನದಾಯಿತು. ದಾದಿಯರ ಲಲ್ಲೆ ಮಾತುಗಳನ್ನು ಅರ್ಥೈಸಿಕೊಂಡು ಕಿಲಕಿಲನೆ ನಕ್ಕು ತೀಕ್ಷ್ಣವಾಗಿ ಪ್ರತಿಕ್ರಿಯಿಸುವ ಮತಿವಂತಿಕೆಗೆ ಮನಸೋತು ಆ ಶಿಶುವಿಗೆ 'ವಿಕರ್ಣ' (ತೀಕ್ಷ್ಣವಾದ ಬಾಣ ಎಂಬ ಅರ್ಥವಿದೆ) ಎಂಬ ನಾಮಕರಣವನ್ನು ಮಾಡಿದರಂತೆ.

ಸ್ವಲ್ಪ ಸಮಯದ ಬಳಿಕ ಮತ್ತೊಂದು ಮಂತ್ರವನ್ನು ಪಠಿಸಿ ದೇವೇಂದ್ರನನ್ನು ಒಲಿಸಿಕೊಂಡ ಕುಂತಿಯು ಗರ್ಭವತಿಯಾಗಿ ಅರ್ಜುನನನ್ನು ಹಡೆದಳು. ಮಾದ್ರಿಗೂ ಮಕ್ಕಳಾಗಲಿ ಎಂಬ ಸದುದ್ದೇಶದಿಂದ ಉಳಿದ ಒಂದು ಮಂತ್ರವನ್ನು ಮಾದ್ರಿಗೆ ಉಪದೇಶಿಸಿದಳು. ಆಕೆ ಅಶ್ವಿನೀ ದೇವತೆಗಳನ್ನು ಪ್ರಾರ್ಥಿಸಿ ಅವರ ಅನುಗ್ರಹದಿಂದ ನಕುಲ, ಸಹದೇವರೆಂಬ ಯಮಳರನ್ನು ಹಡೆದಳು.

ಹೀಗಿರಲು ಕಾಲಚಕ್ರ ಉರುಳಿ ಋತುಮಾನಗಳು ಪಲ್ಲಟಿಸಿ ಪಾಂಡುತನಯರು ಬಾಲಕರಾದರು. ವಿರಹಿಗಳಿಗೆ ಮತ್ತೇರಿಸುವ ವಸಂತಾಗಮನವಾಯಿತು. ಶೃಂಗಾರಕ್ಕೆ ಪೂರಕವಾದ ಪ್ರಕೃತಿ ಸೌಂದರ್ಯದಿಂದ ವಿಪಿನವು ಸಾಲಂಕೃತವಾಯಿತು. ತಳಿತ ಮಾಮರಗಳಿಂದ ಕೋಗಿಲೆಗಳು ಶೋಭಾಯಮಾನವಾಗಿ ಹಾಡಿ ವಸಂತನಿಗೆ ಶುಭೋದಯವನ್ನು ಕೋರಿದವು. ಮಧುಮಾಸವು ಪಸರಿಸಿ ತಾವರೆಗಳ ಕುಸುಮ ರಸದಬ್ಬರವನ್ನು ಸವಿಯಲು ಮಧುಕರಿಗಳು ಹಾತೊರೆದವು.

ಅರಣ್ಯದಲ್ಲಿ ಒಂದೆಡೆ ವಿಹರಿಸುತ್ತಿದ್ದ ರತಿರೂಪಿಣಿ ಸತಿ ಮಾದ್ರಿಯನ್ನು ಕಂಡು ಪಾಂಡುವು ಉತ್ತೇಜಿತನಾಗಿ ತನ್ನನ್ನು ಕೂಡುವಂತೆ ಅವಳನ್ನು ಬಿಡದೆ ಕಾಡಿದನು. ಕಾಮಾತುರನಿಗೆ ಲಜ್ಜೆ ಎಲ್ಲಿಯದು? ಭಯವೆಲ್ಲಿಯದು? ಅವನ ಕಣ್ಗಳು ಮಸಕಾಗಿ ಬುದ್ಧಿಗೆ ಮಂಕು ಮುಸುಕಿಸಿತು. ಅವಳು ಬಗೆ ಬಗೆಯ ಮಾತುಗಳಿಂದ ಅನುನಯಿಸಿದರೂ ಒಪ್ಪದೆ, ತಟ್ಟನೇ ತುರುಬನ್ನು ಹಿಡಿದೆಳೆದು ಕೆಡಹಿ ಮೇಲೆರಗಿ ಅವಳನ್ನು ನೆರೆದನು. ತಕ್ಷಣವೇ ಮುನಿಯ ಶಾಪವು ಫಲಿತವಾಗಿ ಪಾಂಡುವು ಕುಸಿದು ಸತಿಯ ಎದೆಯಲ್ಲಿ ತಲೆಯನ್ನು ಹುದುಗಿಸಿ ಬಿಕ್ಕಳಿಸಿ, ಬಿಕ್ಕಳಿಸಿ ಬಿಸುಸುಯ್ದು ಮರಣವನ್ನಪ್ಪಿಕೊಂಡನು.

ಪಾಂಡುವಿನ ಪರಿವಾರವೂ, ಮುನಿಜನರೂ ಸಂಭ್ರಾಂತರಾಗಿ ದುಃಖಾರ್ತರಾದರು. ಶೋಕಾರ್ತಳಾದ ಸತಿ ಶಿರೋಮಣಿ ಮಾದ್ರಿ ದೇವಿಯು ತನ್ನ ತನಯರಿಬ್ಬರನ್ನೂ ಕುಂತಿಗೊಪ್ಪಿಸಿ ಪತಿಯೊಂದಿಗೆ ಸಹಗಮನ ಮಾಡಿದಳು. ಮುನಿಜನರು ತಮ್ಮೊಳಗೆ ಸಮಾಲೋಚಿಸಿ ಕುಂತಿಯನ್ನೂ ಪಾಂಡವರೈವರನ್ನೂ ಹಸ್ತಿನಾಪುರಕ್ಕೊಯ್ದು ಭೀಷ್ಮನಿಗೆ ಒಪ್ಪಿಸಿ ಹಿಂದಿರುಗಿದರು. ಶೋಕ ಸಾಗರದಲ್ಲಿ ಮುಳುಗಿದ ಭೀಷ್ಮಾದಿಗಳು ಪಾಂಡುವಿನ ಸದ್ಗತಿಗೆ ಉತ್ತರ ಕ್ರಿಯೆಗಳನ್ನು ನೆರವೇರಿಸಿದರು. ಪಾಂಡುತನಯರೂ, ಕೌರವ ಸುತರೂ ಹಸ್ತಿನಾವತಿಯ ಅರಮನೆಯಲ್ಲಿಯೇ ಒಟ್ಟಿಗೆ ವಾಸಿಸುವಂತಾಯಿತು. ಅಲ್ಲಿಗೆ ದಾಯಾದಿ ಕಲಹಕ್ಕೆ ವೇದಿಕೆಯೊಂದು ಸಿದ್ಧವಾದಂತಾಯಿತು.

(ನಿರೀಕ್ಷಿಸಿರಿ : ಇದರ ಮುಂದುವರಿದ ಭಾಗ-''ಕೌರವ ಗಡಣದಲ್ಲೊಂದು ಬೆಳಕಿನ ಕೂಸು'')


ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಶ್ರಯದಲ್ಲಿ

**ಸೌರ ಋಗುಪಾಕರ್ಮ**ವು

**ತಾ.02-09-2009ರಂದು ಬುಧವಾರ ಶ್ರೀ ಶಾರದಾ ಮಂಟಪದಲ್ಲಿ ನಡೆಯಲಿದ್ದು ಬೆಳಿಗ್ಗೆ 9-30ರಿಂದ ಕಾರ್ಯಕ್ರಮವು ಪ್ರಾರಂಭವಾಗಲಿದೆ. ಸಮಾಜ ಬಾಂಧವರು ಸಮಯಕ್ಕೆ ಸರಿಯಾಗಿ ಬಂದು ಉಪಾಕರ್ಮದಲ್ಲಿ ಭಾಗವಹಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.**

**- ಕಾರ್ಯದರ್ಶಿ**


## ಗಣೇಶನು ಹುಟ್ಟಿದ ಕಥೆ

ಗಣೇಶ ಜನಿಸಿದ ಕಥೆಯನು ಹೇಳುವೆ
ಕೇಳಿರಿ ಮಕ್ಕಳೆ ನೀವೆಲ್ಲ
ಗಣೇಶನ ತಲೆಯನು ಶಿವನು ತೆಗೆದ
ಕತೆಯ ಕೇಳಿರಿ ಭಯವಿಲ್ಲ.
ಸ್ನಾನ ಗೃಹದಲಿ ಪಾರ್ವತಿ ದೇವಿಯು
ಮೈಗೆ ಚಂದನವ ಹಚ್ಚಿದಳು
ತನಗೂ ಒಂದು ಸುಂದರ ಮಗುವು
ಇರಬೇಕೆಂದು ಬಯಸಿದಳು
ಮೈಮೇಲಿ ಹಚ್ಚಿದ ಚಂದನದಲ್ಲಿ
ಮಗುವಿನ ಗೊಂಬೆಯ ಮಾಡಿದಳು
ಜೀವವ ನೀಡಿ ಪಾರ್ವತಿ ದೇವಿಯು
ಮುದ್ದಿನ ಮಗುವಿಗೆ ಹೇಳಿದಳು
ಮಗನೆ ನೀನು ನನ್ನಯ ಪುತ್ರ
ಹೊರಗಿನ ಬಾಗಿಲ ಕಾಯುತಿರು
ಅಪ್ಪಣೆಯಿಲ್ಲದೆ ಯಾರನು ಒಳಗೆ
ಎಂದಿಗೂ ನೀನು ಬಿಡದಿರು
ತಾಯಿಯ ಅಪ್ಪಣೆ ಕೇಳಿದ ಪುತ್ರನು
ಬಾಗಿಲ ಬಳಿಗೆ ಬಂದನು
ತಾಯಿಯ ಸ್ಮರಣೆಯ ಮಾಡುತ ಅವನು
ಬಾಗಿಲ ಕಾಯುತ ನಿಂತನು
ಹೊರಗಡೆ ಹೋದ ಶಿವನು ಬಂದನು
ಬಾಗಿಲ ಬಳಿ ನಿಂತನು
ಒಳಗಡೆ ಹೋಗಲು ದಾರಿಯ ಬಿಡು
ಶಿವನು ನಾನು ಎಂದನು
ತಾಯಿಯ ಅಪ್ಪಣೆ ಇಲ್ಲದೆ ನಾನು
ಯಾರನು ಒಳಗೆ ಬಿಡೆನು
ಬಾಗಿಲ ಬಳಿಯಲಿ ನಿಲ್ಲದೆ ನೀನು
ಹೊರಗೆ ಹೋಗು ಎಂದನು
ಹುಡುಗನ ಮಾತನು ಕೇಳಿದ ಶಿವನು
ಕೋಪದಿ ಶೂಲವ ಎತ್ತಿದನು
ನನ್ನಯ ಕೋಪಕೆ ಸಿಕ್ಕಿ ನೀನು
ಸಾಯಲು ಬೇಡ ಎಂದನು
ಶಿವನ ಮಾತಿಗೆ ಹೆದರದ ಬಾಲಕ
ಯುದ್ಧಕೆ ತಾನೇ ನಿಂತನು
ಯುದ್ಧವು ನಡೆದು ಸೋಲರು ಒಬ್ಬರು
ಶೂರನು ಇವ ಬಾಲಕನು
ಶಿವನು ಕೋಪದಿ ರುದ್ರನು ಆದನು
ತ್ರಿಶೂಲವ ಎತ್ತಿ ಬೀಸಿದನು
ಹುಡುಗನ ತಲೆಯು ಹಾರಿ ಹೋಗಿ
ಅಮ್ಮ ಎಂದು ಬಿದ್ದನು
ಪಾರ್ವತಿ ದೇವಿಯು ಅಳುತ ಬಂದಳು
ಮಗನ ಶಿರವು ನೋಡಿದಳು
ನನ್ನಯ ಕಂದನು ಇವನು ಎನ್ನುತ
ಬದುಕಿಸಿ ಎಂದು ಬೇಡಿದಳು
ತಪ್ಪಿನ ಅರಿವು ಆಗುತ ಶಿವನು
ಬೇಗದಿ ಕರೆದನು ಗಣಗಳನು
ಉತ್ತರ ದಿಕ್ಕಲಿ ಮಲಗಿದ ಜೀವಿಯ
ತಲೆಯನು ತನ್ನಿರಿ ಎಂದನು
ಉತ್ತರ ದಿಕ್ಕಲಿ ಮಲಗಿದ ಆನೆಯ
ಶಿರವನು ತಂದರು ಗಣಗಳು
ಮಗುವಿನ ಮುಂಡಕೆ ಆನೆಯ ರುಂಡವ
ಇಟ್ಟು ಶಿವನು ಬದುಕಿಸಿದನು
ಆನೆಯ ಮುಖದ ಬಾಲಕ ಎದ್ದನು
ತಂದೆ-ತಾಯಿಗೆ ನಮಿಸಿದನು
ಮೊದಲ ಪೂಜೆಗೆ ಅರ್ಹನು ನೀನು
ವರವನು ಇತ್ತನು ಪರಶಿವನು
ಜಯ ಜಯ ಗಣಪತಿ ಜಯವೆನ್ನುತ
ಗಣಗಳು ಹಾಡುತ ನಲಿದರು.
ಭಕ್ತಿಯಿಂದ ಪೂಜೆಯ ಮಾಡಿ
ಗಣಪನ ಪಾದಕೆ ನಮಿಸಿದರು

- ಮಾರ್ಪಳ್ಳಿಆರ್. ಮಂಜುನಾಥ್, ಶಿವಮೊಗ್ಗ

## ಮಾಂಗಲ್ಯಂ ತಂತುನಾನೇನ ....

ಅಜ್ಜಾವರ ಬಯಂಬು ಶ್ರೀಮತಿ ಮತ್ತು ಶ್ರೀ ಶಿವರಾಯರ ಪುತ್ರ **ರವೀಶ್** ಹಾಗೂ ಮಂದರ್ತಿ ಬರದಕಲ್ಲು ಶ್ರೀಮತಿ ಮತ್ತು ಶ್ರೀ ಬಿ. ಕೆ. ಮೋಹನ ರಾಯರ ಪುತ್ರಿ **ರೂಪ** ಇವರ ವಿವಾಹವು ತಾ.05-08-2009ರಂದು ಮಂದರ್ತಿ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

## A very Important SMS

**SWINE FLU SYMPTOMS**

1. Cough along with Chest Pain
2. Respiratory problems (should be checked immediately, Consult a doctor without dealy)
3. Persistent fever for more than 3 days with drowsiness.
4. Low blood pressure
5. Nails turn blue, it means severe case

BEWARE
THIS MAY BE
SWINE FLU

## ವಿಳಾಸ ಬದಲಾವಣೆ

Y.V.JAYARAMA
G G M (E)-SAM2,
Eastern Offshore Asset, ONGC,
2nd Floor, South Block,
Subhadra Aracade,
Bhanugudi Junction,
Kakinada - 533 003, (A.P.State)

## ಸಿಂಹ ಮಾಸದ ವಿಶೇಷ ದಿನಗಳು

| | |
|---|---|
| 16-08-2009 | ಸಿಂಹ ಸಂಕ್ರಮಣ<br>ಸ್ಮಾರ್ಥ ಏಕಾದಶೀ<br>ಮಘಾ ನಕ್ಷತ್ರಾರಂಭ |
| 17-08-2009 | ಭಾವೈಕಾದಶೀ |
| 18-08-2009 | ಪ್ರದೋಷಃ |
| 20-08-2009 | ಅಮಾವಾಸ್ಯಾ |
| 22-08-2009 | ಗೌರೀ ತೃತೀಯಾ |
| 23-08-2009 | ಶ್ರೀ ಗಣೇಶ ಚತುರ್ಥೀ |
| 30-08-2009 | ಪೂರ್ವಭಾದ್ರಾ ನಕ್ಷತ್ರಾರಂಭ |
| 31-08-2009 | ಸರ್ವೈಕಾದಶೀ |
| 01-09-2009 | ಪ್ರದೋಷಃ |
| 02-09-2009 | ಸೌರ ಋಗುಪಾಕರ್ಮ |
| 03-09-2009 | ಅನಂತ ಚತುರ್ದಶೀ |
| 04-09-2009 | ಪೂರ್ಣಿಮಾ |
| 05-09-2009 | ಮಹಾಲಯಾರಂಭ |
| 08-09-2009 | ಸಂಕಷ್ಟಹರ ಚತುರ್ಥೀ<br>ಚಂದ್ರೋದಯ ರಾತ್ರಿ ಗಂ.9.26ಕ್ಕೆ |
| 11-09-2009 | ಶ್ರೀಕೃಷ್ಣ ಜಯಂತಿ |
| 13-09-2009 | ಉತ್ತರಾಭಾದ್ರಾ ನಕ್ಷತ್ರಾರಂಭ |
| 15-09-2009 | ಸರ್ವೈಕಾದಶೀ |
| 16-09-2009 | ಕನ್ಯಾಸಂಕ್ರಮಣ,<br>ಪ್ರದೋಷಃ |

## ಅಭಿನಂದನೆ

### ಶ್ರೀಮತಿ ಜಯಶ್ರೀ ಶ್ರೀಕೃಷ್ಣಯ್ಯ



ತಾ.29-06-2009ರಂದು ಆಕಾಶವಾಣಿ ಮಂಗಳೂರು ಏರ್ಪಡಿಸಿದ ಕರ್ನಾಟಕ ಲಘುಸಂಗೀತ ಆಡಿಷನ್ ಪರೀಕ್ಷೆಯಲ್ಲಿ ಶ್ರೀಮತಿ ಜಯಶ್ರೀ ಶ್ರೀಕೃಷ್ಣಯ್ಯ ಅನಂತಪುರ ಅವರು ತೇರ್ಗಡೆ ಹೊಂದಿ ಮಂಗಳೂರು ಆಕಾಶವಾಣಿಯ 'ಬಿ' ಗ್ರೇಡ್ ಕಲಾವಿದೆಯಾಗಿ ಆಯ್ಕೆಗೊಂಡಿದ್ದಾರೆ.

### ಸಂತೋಷಿ ಪಿ. ರಾವ್



ಉಡುಪಿ ಪೂರ್ಣಪ್ರಜ್ಞ ಕಾಲೇಜಿನ ವಿದ್ಯಾರ್ಥಿನಿಯಾದ ಸಂತೋಷಿ ಪಿ. ರಾವ್ ಇವರು ಬಿ.ಎಸ್ಸಿ. ಕಂಪ್ಯೂಟರ್ ಸಾಯನ್ಸ್‌ನಲ್ಲಿ 6ನೇ ಸೆಮಿಸ್ಟರ್‌ನಲ್ಲಿ ಶೇ.92.5 ಅಂಕಗಳನ್ನು ಗಳಿಸಿ (ಬಿ.ಎಸ್ಸಿ. ಎಗ್ರೆಗೇಟ್ ಶೇ.85%) ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿರುತ್ತಾರೆ. ಪ್ರಸಕ್ತವಾಗಿ ಮಣಿಪಾಲದ ಎಮ್.ಐ.ಟಿ.ಯಲ್ಲಿ ಎಮ್.ಸಿ.ಎ. ವ್ಯಾಸಂಗವನ್ನು ಮಾಡುತ್ತಿದ್ದಾರೆ. ಇವರು ಉಡುಪಿ ಚಿಟ್ಪಾಡಿಯ ಶ್ರೀ ಎಸ್. ಪ್ರಭಾಕರ ರಾವ್ ಮತ್ತು ಶ್ರೀಮತಿ ಪಿ. ನಿರ್ಮಲರವರ ಪುತ್ರಿ. ಇವರ ಈ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು

### ಕು। ಪೂಜಾ ರಾವ್



ಲಿಟಲ್‌ರಾಕ್ ಇಂಡಿಯನ್ ಸ್ಕೂಲ್ ಬ್ರಹ್ಮಾವರದ ವಿದ್ಯಾರ್ಥಿನಿಯಾದ ಕು। ಪೂಜಾ ರಾವ್ ಇವರು ಪ್ರಸಕ್ತ 2ನೇ ವರ್ಷದ ಪಿಯುಸಿ ಪರೀಕ್ಷೆಯಲ್ಲಿ ಕಾಲೇಜಿಗೆ ದ್ವಿತೀಯ ಸ್ಥಾನವನ್ನು ಗಳಿಸಿದ್ದಾರೆ. ಇವರು ಅಖಿಲ ಭಾರತ ತಾಂತ್ರಿಕ ಪ್ರವೇಶ ಪರೀಕ್ಷೆಯಲ್ಲಿ ರಾಜ್ಯಕ್ಕೆ 13ನೇ ರ್‍ಯಾಂಕನ್ನು ಪಡೆದಿರುತ್ತಾರೆ. ಇವರು ದಿಲ್ಲಿಯ ಪ್ರಸಿದ್ಧ ಸ್ಕೂಲ್ ಆಫ್ ಪ್ಲಾನಿಂಗ್ ಮತ್ತು ಆರ್ಕಿಟೆಕ್ಚರ್‌ಗೆ ಪ್ರವೇಶ ಪಡೆದಿದ್ದಾರೆ. ಇವರು ಮಸ್ಕತ್‌ನಲ್ಲಿರುವ ಪ್ರೊಫೆಸರ್ ಸಾಂತೂರು ಸುಬ್ರಹ್ಮಣ್ಯ ರಾವ್ ಹಾಗೂ ಮಣಿಪಾಲ ಸಿಂಡಿಕೇಟ್ ಬ್ಯಾಂಕಿನ ಉದ್ಯೋಗಿ ಶ್ರೀಮತಿ ವೇದವಲ್ಲಿ ಮುಲ್ಕಿ ಇವರ ಸುಪುತ್ರಿ. ಇವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ಗೃಹಪ್ರವೇಶ

ಉಡುಪಿ ಅಂಬಲಪಾಡಿಯಲ್ಲಿರುವ ಶ್ರೀ ಕೆ. ರಂಗಯ್ಯ ಹೆಬ್ಬಾರ್ ಮತ್ತು ಮಕ್ಕಳು ಅಂಬಲಪಾಡಿ ಮಹಾಕಾಳಿ ಮಾರ್ಗದ ಹತ್ತಿರ ನೂತನವಾಗಿ ನಿರ್ಮಿಸಿದ ಗೃಹ 'ನೆಮ್ಮದಿ'ಯ ಪ್ರವೇಶೋತ್ಸವವು ತಾ.5-7-2009 ರಂದು ರಾತ್ರಿ ನಡೆಯಿತು. ಮರುದಿನ ಅಂಬಲಪಾಡಿ ಮಹಾಕಾಳಿ ದೇವಿಯ ಸನ್ನಿಧಿಯಲ್ಲಿ ಶ್ರೀ ಚಂಡಿಕಾಯಾಗವನ್ನು ಬಂಧುಬಾಂಧವರನ್ನು ಆಮಂತ್ರಿಸಿ ನೆರವೇರಿಸಿದರು.

## ಏಕಾದಶ ರುದ್ರ

ಶ್ರೀಯುತ ಬಿ. ವಾಸುದೇವರಾವ್ ದಂಪತಿಗಳು ಮತ್ತು ಮಕ್ಕಳು ಶಾರದಾ ದೇವಸ್ಥಾನ, ಕುಂಜಿಬೆಟ್ಟು ಇಲ್ಲಿ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ದಿನಾಂಕ 23-06-2009ರಂದು ಏಕಾದಶ ರುದ್ರ ಪೂಜೆಯನ್ನು ನೆರವೇರಿಸಿದರು. ಆ ದಿನ ಶ್ರೀ ಬೆಳ್ಮಣ್ಣು ವಾಸುದೇವರಾಯರ 78ನೇ ಜನ್ಮದಿನ. ಶ್ರೀಯುತರಿಗೆ ದೇವಿಯು ಆಯುಷ್ಯ, ಆರೋಗ್ಯ ಕರುಣಿಸಲೆಂದು ಶ್ರೀಶಾರದಾ ಬಳಗವು ಹಾರೈಸುತ್ತದೆ.

## ಸಾಮೂಹಿಕ ಗಣಹೋಮ

ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿ ತಿಂಗಳು **ಸಂಕಷ್ಟಹರ ಚತುರ್ಥಿಯಂದು** ನಡೆಯುತ್ತಿರುವ

**ಸಾಮೂಹಿಕ ಗಣಹೋಮವು**

ತಾ.08-09-2009ರಂದು ನಡೆಯಲಿದೆ.

**ಗಣಹೋಮ ಸೇವಾ ಶುಲ್ಕ ರೂ.51/-**

ಗಣಹೋಮ ಸೇವೆ ನೀಡಲು ಇಚ್ಛಿಸುವವರು ಶಾರದಾ ಮಂಟಪದ ಮೆನೇಜರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.

**- ಶ್ರೀಶಾರದಾ ದೇವಸ್ಥಾನ ವೇದಿಕೆ**

ಶ್ರೀಶಾರದಾ ದೇವಸ್ಥಾನದಲ್ಲಿ **ಸಪ್ಟೆಂಬರ್ ತಿಂಗಳಲ್ಲಿ**
**ತಾ.12-09-2009ರ ಶನಿವಾರ**
ಸಂಜೆ ಗಂಟೆ 5-00ರಿಂದ

## ಗಮಕವಾಚನ-ಪ್ರವಚನ

ಕಾರ್ಯಕ್ರಮವು ನಡೆಯಲಿದೆ.

ವಾಚನ : ಭಾಗವತ, ಗಮಕಿ ನೀಲಾವರ **ಲಕ್ಷ್ಮೀನಾರಾಯಣರಾವ್**

ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನಕಾರ **ಶ್ರೀ ಬಾರ್ಕೂರು ನಾಗೇಶರಾವ್.**

**ಸರ್ವರಿಗೂ ಆದರದ ಸ್ವಾಗತ**

**- ಶ್ರೀಶಾರದಾ ದೇವಸ್ಥಾನ ವೇದಿಕೆ**

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

ಡಾ। ವೈ. ಸುದರ್ಶನ ರಾವ್

**ಪ್ರಶ್ನೆ : ನ್ಯೂರೋಪತಿ ಎಂದರೇನು? ಅದನ್ನು ಗುಣಪಡಿಸಿಕೊಳ್ಳುವ ಪರಿ ಎಂತು? ಇದಕ್ಕೆ ಯಾವ ವೈದ್ಯರು ಚಿಕಿತ್ಸೆ ನೀಡುತ್ತಾರೆ?**

**ಉತ್ತರ :** ನಮ್ಮ ಇಡೀ ದೇಹದ ಮೂಲೆ ಮೂಲೆಗಳಲ್ಲೂ ನರಾಗ್ರಗಳಿವೆ. ಈ ನರಾಗ್ರಗಳ ಮೂಲಕ ದೇಹದ ಎಲ್ಲಾ ಭಾಗಗಳಿಂದಲೂ ಸ್ಪರ್ಶ, ನೋವು, ಒತ್ತಡ ಇತ್ಯಾದಿ ಸಂವೇದನೆಗಳು ಮೆದುಳಿಗೆ ರವಾನೆಯಾಗಿ ನಮ್ಮ ಅರಿವಿಗೆ ಬರುತ್ತದೆ. ಯಾವುದೇ ಕಾರಣದಿಂದಾಗ ಈ ನರಮಂಡಲದ ಯಾವುದಾದರೊಂದು ಭಾಗದ ಕೆಲಸದಲ್ಲಿ ನ್ಯೂನತೆ ಉಂಟಾದರೆ ಆಗ ದೇಹದ ಆ ಭಾಗದಲ್ಲಿ ಸಂವೇದನೆ ನಷ್ಟವಾಗುತ್ತದೆ. ಆ ಖಾಯಿಲೆಯನ್ನು ನ್ಯೂರೋಪತಿ (peripheral neuritis) ಎನ್ನುವರು. ಹೆಚ್ಚಾಗಿ ಈ ಖಾಯಿಲೆಯು ಕಾಲು (ಪಾದ) ಹಾಗೂ ಕೈಗಳಲ್ಲಿ ಕಂಡುಬರುತ್ತದೆ. ಈ ಖಾಯಿಲೆಯ ಆರಂಭದಲ್ಲಿ ಕೈಕಾಲುಗಳಲ್ಲಿ ಇರುವೆ ಹರಿದಾಡಿದಂತಾಗುವುದು. ಸೂಜಿಯಲ್ಲಿ ಚುಚ್ಚಿದಂತಾಗುವುದು, ಕಚಗುಳಿ, ಜೋಮು ಹಿಡಿದ ಅನುಭವವಾಗುವುದು ಇರುತ್ತದೆ. ಖಾಯಿಲೆ ಮುಂದುವರಿದಂತೆ ಸ್ಪರ್ಶಜ್ಞಾನ ಕಡಿಮೆಯಾಗುವುದು. ಕೊನೆಗೆ ಸ್ಪರ್ಶ, ನೋವು, ಒತ್ತಡ ಇತ್ಯಾದಿ ಯಾವುದೇ ಸಂವೇದನೆ ಆ ಭಾಗದಲ್ಲಿ ರೋಗಿಗೆ ತಿಳಿಯುವುದಿಲ್ಲ. ಇಂತಹ ಈ ಖಾಯಿಲೆ ಸಾಮಾನ್ಯವಾಗಿ ಸಿಹಿಮೂತ್ರ ಹಾಗೂ ಕುಷ್ಠರೋಗವನ್ನು ಸುಮಾರು ವರ್ಷಗಳಿಂದ ಅನುಭವಿಸುತ್ತಿರುವವರಲ್ಲಿ ಕಾಣುತ್ತೇವೆ.

**ಈ ಖಾಯಿಲೆಯಿಂದಾಗುವ ತೊಂದರೆಗಳು :**

- ನ್ಯೂರೋಪತಿಯ ಚಿಹ್ನೆಗಳಾದ ಇರುವೆ ಹರಿದಾಡಿದಂತಾಗುವುದು, ಸೂಜಿ ಚುಚ್ಚಿದಂತಾಗುವುದು ಇತ್ಯಾದಿಗಳನ್ನು ಸಹಿಸಿಕೊಳ್ಳುವುದು ರೋಗಿಗೆ ಕಷ್ಟವಾಗಬಹುದು.
- ಎಲ್ಲಕ್ಕಿಂತ ಮುಖ್ಯವಾದುದೆಂದರೆ, ನೋವಿನ ಅರಿವು ಇಲ್ಲದಿರುವುದರಿಂದ ಕಾಲಿಗೆ ಗಾಯವಾದರೂ, ಗಾಯವಾಗುವಂತಹ ಪರಿಸ್ಥಿತಿಯಲ್ಲಿ ನಡೆಯುತ್ತಿದ್ದರೂ ಅವರಿಗೆ ತಿಳಿಯುವುದೇ ಇಲ್ಲ. ಉದಾ : ಬಿಸಿಯಾಗಿರುವ ಟಾರುರಸ್ತೆಯಲ್ಲಿ ಇತರರಿಗೆ ನಡೆಯಲು ಸಾಧ್ಯವಿಲ್ಲವಾದರೆ ನ್ಯೂರೋಪತಿ ರೋಗಿಯು ಸಲೀಸಾಗಿ ನಡೆದು ಬಂದು ಪಾದಕ್ಕೆ ಸುಟ್ಟಗಾಯ ಮಾಡಿಕೊಳ್ಳುವನು. ಹಾಗೆಯೇ ಚಪ್ಪಲಿಯೊಳಗೆ ಆಣಿ ಚುಚ್ಚಿಕೊಂಡಿದ್ದು ಅದು ವಾರಗಟ್ಟಲೆ ಪಾದಕ್ಕೆ ಚುಚ್ಚುತ್ತಿದ್ದರೂ ಅವರಿಗೆ ತಿಳಿಯುವುದಿಲ್ಲ.
- ನ್ಯೂರೋಪತಿ ಇರುವ ಪಾದದ ಎಲುಬುಗಳು ತನ್ನಿಂತಾನೆ ಸವೆಯುವವು (osteoporosis) ಬೆರಳಿನ ತುದಿಯಲ್ಲಿ ಸಣ್ಣ ಸಣ್ಣ ಗಾಯಗಳು ತನ್ನಿಂತಾನೆ ಮೂಡುವವು. ಪಾದದಲ್ಲಿ ದೇಹದ ಭಾರ ಬೀಳುವ ಪ್ರದೇಶದಲ್ಲಿ ತೂತಿನಂತಹ ಗಾಯಗಳಾಗಿ (trophic ulcer) ಅವು ಗುಣವಾಗುವುದಿಲ್ಲ. ತೀವ್ರ ತರಹದ ಗಾಯವಾಗಿದ್ದರೂ, ಗಾಯ ಉಲ್ಬಣಗೊಂಡಿದ್ದರೂ ನೋವಿಲ್ಲದಿರುವುದರಿಂದ ರೋಗಿಯು ಅದನ್ನು ನಿರ್ಲಕ್ಷ್ಯ ಮಾಡುವುದೇ ಅತಿ ದೊಡ್ಡ ತೊಂದರೆ.

**ಚಿಕಿತ್ಸೆ :**

- ಕಾರಣಕಾರಿ ರೋಗಗಳಾದ ಸಿಹಿಮೂತ್ರ ಅಥವಾ ಕುಷ್ಠರೋಗವನ್ನು ಹತೋಟಿಯಲ್ಲಿಟ್ಟರಬೇಕು.
- ಕೊಲೆಸ್ಟಿರಾಲ್ ಮತ್ತು ರಕ್ತದೊತ್ತಡಗಳು ಪರಿಸ್ಥಿತಿಯನ್ನು ಹದಗೆಡಿಸುವುದರಿಂದ ಅವನ್ನೂ ಹತೋಟಿಯಲ್ಲಿಟ್ಟರಬೇಕು. ಮದ್ಯಪಾನ ಧೂಮಪಾನ ಸೇರಿದಂತೆ ದಶ್ಚಟಗಳಿಂದ ದೂರವಿರಬೇಕು.
- ಕಳೆದ ಸಂಚಿಕೆಯಲ್ಲಿ ಪಾದಗಳ ರಕ್ಷಣೆಯ ಬಗ್ಗೆ ವಿವರಿಸಿದ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕು.
- ನ್ಯೂರೈಟಿಸ್‌ನ್ನು ಗುಣಪಡಿಸುವುದು ಕಷ್ಟ. ಕಾರಣಕಾರಿ ರೋಗವನ್ನು ಹತೋಟಿಯಲ್ಲಿ ಡುವುದರಿಂದ ಪರಿಸ್ಥಿತಿ ಕೈಮೀರುವುದನ್ನು ತಪ್ಪಿಸಬಹುದು.

ಈ ರೋಗಕ್ಕೆ ಫಿಜಿಶಿಯನ್ನರ (M.D., Medicine) ಚಿಕಿತ್ಸೆ ಸೂಕ್ತ. ಹೆಚ್ಚಿನ ಚಿಕಿತ್ಸೆ ಬೇಕಿದ್ದರೆ ನ್ಯೂರೋಲಜಿಷ್ಟರನ್ನು (M.D., D.M.) ಸಂಪರ್ಕಿಸಬಹುದು. ಗಾಯಗಳಾಗಿದ್ದರೆ ಶಸ್ತ್ರಚಿಕಿತ್ಸಕರ (M.S.) ಸಲಹೆ ಪಡೆಬಹುದು.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು.**
**ಸಂಚಾರಿ ದೂರವಾಣಿ ನಂ. : 98451 36322**

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.

## ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ

## ಅರ್ಜಿ ಆಹ್ವಾನ

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು "ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ"ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2009-2010ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು. ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ತಮ್ಮ ಹೆಸರು, ರಕ್ಷಕರ ಹೆಸರು, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.15-9-2009ರ ಒಳಗೆ ತಲುಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು.**

**ಸಂಚಾಲಕರು,** ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),
ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.

ವಿದ್ಯಾರ್ಥಿ ವೇತನ ವೇದಿಕೆ

### ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್., ಬಿ.ಎಡ್., ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.60,000/-ಕ್ಕೆ ಮೀರದ (ಅರ್ಜಿ ಸಲ್ಲಿಸುವಾಗ ಈ ವಿಚಾರವನ್ನು ಅಭ್ಯರ್ಥಿಗಳು ದಯವಿಟ್ಟು ಗಮನಿಸಬೇಕು) ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಯ ಜೊತೆಯಲ್ಲಿ ಹಿಂದಿನ ತರಗತಿಯ ಅಂಕಪತ್ರ ಹಾಗೂ ಪ್ರಸಕ್ತ ಕಲಿಯುತ್ತಿರುವ ಶಾಲೆಯ ಮುಖ್ಯಸ್ಥರ ಪ್ರಮಾಣಪತ್ರವನ್ನು ಒದಗಿಸಬೇಕು. ಅರ್ಜಿ ಫಾರಂಗಳು ಶ್ರೀಶಾರದಾ ಮಂಟಪದ ಕಛೇರಿಯಲ್ಲಿ ಲಭ್ಯವಿದೆ. ಅರ್ಜಿ ಫಾರಂಗಳನ್ನು ತುಂಬಿಸಿ ಸಂಬಂಧಪಟ್ಟ ದಾಖಲೆಗಳೊಂದಿಗೆ ತಾ.15-9-2009ರ ಒಳಗೆ ಸಂಘದ ಕಛೇರಿಗೆ ಕಳುಹಿಸುವುದು.

ವಿದ್ಯಾರ್ಥಿವೇತನ ಪಡೆದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಮೊಬಲಗನ್ನು ಹಿಂದಿನ ವರ್ಷದಂತೆಯೇ ಎಂ.ಓ. ಮೂಲಕ ಕಳುಹಿಸಲಾಗುವುದು.

- ಅಧ್ಯಕ್ಷರು, ವಿದ್ಯಾರ್ಥಿವೇತನ ವೇದಿಕೆ, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 101.

## ಅರ್ಚಕರು ಬೇಕಾಗಿದ್ದಾರೆ

### ಶ್ರೀ ಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ

ಶ್ರೀ ಶಾರದಾ ದೇವಸ್ಥಾನಕ್ಕೆ ಪೂಜಾ ವಿಧಿ-ವಿಧಾನಗಳನ್ನು ಬಲ್ಲ ಓರ್ವ ಅರ್ಚಕರು ಬೇಕಾಗಿದ್ದಾರೆ. ಅರ್ಚಕರಿಗೆ ವಾಸ್ತವ್ಯಕ್ಕೆ ಮನೆ ವ್ಯವಸ್ಥೆಯಿದ್ದು, ಪೂರ್ಣಾವಧಿ ಶ್ರೀ ಶಾರದಾ ದೇವಸ್ಥಾನದಲ್ಲಿ ಇರಬೇಕಾಗುತ್ತದೆ.

*ಆಸಕ್ತರು ಕೂಡಲೇ ವಿವರಗಳೊಂದಿಗೆ ಸಂಪರ್ಕಿಸಿರಿ :*



**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ-2.**
**ದೂರವಾಣಿ : 0820-2520754**


## ರಾಮಾ ಅಟೋಮೊಬೈಲ್ಸ್

ಮಾರುತಿ ವಾಹನ ತಜ್ಞರು

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.

**ಫೋನ್ : 2454355, ಮೊಬೈಲ್ : 94485 45702**


ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ


ಉಡುಪಿ ವಿಶಿಷ್ಟ ರುಚಿಯುಳ್ಳ

## Rao's 'ಮಾತೃಛಾಯಾ'ರವರ

ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪೆಮಿಡಿ ಹಾಗೂ ಮಿಡಿ ಉಪ್ಪಿನಕಾಯಿ ಹಪ್ಪಳ ಹಾಗೂ ಸೆಂಡಿಗೆಗಳು, ಶುದ ದನದ ತುಪ್ಪ ಹಾಗೂ ಜೇನು ತುಪ್ಪ

**-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-**

### ಭಾರತ್ ಸ್ಟೋರ್ಸ್

ರಥಬೀದಿ, ಉಡುಪಿ - 576 101. ಫೋನ್ : 2522444


## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

### ಪ್ರಕಟಣೆ

2009-10ನೇ ವರ್ಷಕ್ಕೆ ಶ್ರೀ ಸಭೆಯ ವತಿಯಿಂದ ನೀಡುವ ವಿದ್ಯಾರ್ಥಿ ವೇತನಕ್ಕೆ ಸಮಾಜದ ಬಡ ಕುಟುಂಬಗಳಿಂದ ಬರುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು 31-10-2009ರ ಒಳಗೆ ಈ ಸಭೆಗೆ ಸಲ್ಲಿಸಬೇಕು.

**ಅರ್ಜಿಗಳು ದೊರೆಯುವ ಸ್ಥಳ :**

- ಶ್ರೀ ಸುಬ್ರಹ್ಮಣ್ಯ ಸಹಕಾರಿ ಸಂಘ, ಮಂಗಳೂರು
- ಶ್ರೀ ಕೆ. ಹರ್ಷಕುಮಾರ್, ಪ್ರಮೋದ್ ಆಟೋಮೊಬೈಲ್ಸ್, ಕರಂಗಲ್ಪಾಡಿ, ಮಂಗಳೂರು
- ಶ್ರೀ ಬಿ. ಎಸ್. ಅನಿಲ್ ರಾವ್, ಏಶುರಾಮ್ ಮೋಟಾರ್ಸ್, ಮಂಗಳೂರು
- ಶ್ರೀ ಶಾರದ ಮಂಟಪ, ಉಡುಪಿ
- ಶ್ರೀ ಎಮ್.ಎನ್.ರಘುನಾಥ ರಾವ್, ರಾಜೇಶ್ ಪವರ್‌ಪ್ರೆಸ್, ಪುತ್ತೂರು
- ಶ್ರೀ ಎಸ್.ಎನ್.ನಟರಾಜ, ಪೋಸ್ಟ್ ಆಫೀಸಿನ ಹತ್ತಿರ, ಪುತ್ತೂರು.
- ಶ್ರೀ ಉಮೇಶ ಶ್ಯಾನುಭಾಗ, ಮುಕಾಂಬಿಕ ಟಿಂಬರ್ಸ್, ಕಿರಿಮಂಜೇಶ್ವರ, ಕುಂದಾಪುರ
- ಶ್ರೀ ಬಿ. ಎನ್.ಸುರೇಶ್, ಉಜಿರೆ
- ಶ್ರೀ ಬಿ. ಭಾಸ್ಕರ ರಾವ್, ನಾವೂರ್ ರೋಡ್, ಗಾಂಧಿನಗರ, ಸುಳ್ಯ.
- ಶ್ರೀ ಎ.ಎ. ಶ್ಯಾನುಭೋಗ್, ಎಡ್ವೋಕೇಟ್, ಬ್ಯಾಂಕ್ ರೋಡ್, ಕಾಸರಗೋಡು.

**- ಕರುಣ್‌ರಾವ್ ಬೆಳ್ಳೆ, ಕಾರ್ಯದರ್ಶಿ**

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

### ಪ್ರಕಟಣೆ

2009-10ನೇ ಸಾಲಿನ ಸಾಲವಿದ್ಯಾರ್ಥಿ ವೇತನಕ್ಕೆ ಶ್ರೀಸಭೆಗೆ ಡಾ| ದಯಾನಂದ ಎಸ್.ರಾವ್ ಎಜ್ಯುಕೇಶನಲ್ ಟ್ರಸ್ಟ್ ಬೆಂಗಳೂರು ಇದರ ವತಿಯಿಂದ ಶ್ರೀ ಐ. ಕೆ. ರಘುರಾಮ ರಾವ್ ಹಾಗೂ ಶ್ರೀ ಎಚ್. ವಸುದೇವರಾವ್ ಇವರುಗಳ ಸ್ಮಾರಕವಾಗಿ ರೂ.3,00,001/- ಧನಸಹಾಯ ಬಂದಿರುತ್ತದೆ.

ಈ ನಿಧಿಯಿಂದ ಸಮಾಜದ ತಾಂತ್ರಿಕ ವಿದ್ಯಾಭ್ಯಾಸವನ್ನು ಮಾಡುವ ವಿದ್ಯಾರ್ಥಿಗಳಿಗೆ ಸಾಲವಿದ್ಯಾರ್ಥಿ ವೇತನವನ್ನು ನೀಡಲಾಗುವುದು. ಈ ಬಗ್ಗೆ ಬಿಳಿಹಾಳೆಯಲ್ಲಿ ಅರ್ಜಿಗಳನ್ನು ಸಲ್ಲಿಸಬೇಕಾಗಿ ಕೋರಲಾಗಿದೆ.

ಹೆಚ್ಚಿನ ಮಾಹಿತಿಗೆ ಶ್ರೀ ಕರುಣ್‌ರಾವ್, ಬೆಳ್ಳೆ, ಕಾರ್ಯದರ್ಶಿ ಇವರನ್ನು (ಮೊಬೈಲ್ : 9243309120) ಸಂಪರ್ಕಿಸಬೇಕಾಗಿ ಕೋರಲಾಗಿದೆ.

## ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಯ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)

**76 ಬಡಗಬೆಟ್ಟು, ಕುಕ್ಕಿಕಟ್ಟೆ, ಉಡುಪಿ**

ನಮ್ಮ ಟ್ರಸ್ಟ್‌ನ ವತಿಯಿಂದ ಕೊಡಲಾಗುತ್ತಿರುವ ದಿ| ಡಾ| ವೈ. ಚಂದ್ರಶೇಖರ ರಾವ್ ಸ್ಮಾರಕ ವಿದ್ಯಾರ್ಥಿ ವೇತನಕ್ಕಾಗಿ ಪ್ರತಿಭಾವಂತ ಹಾಗೂ ಆರ್ಥಿಕವಾಗಿ ಹಿಂದುಳಿದ ತಾಂತ್ರಿಕ (Engineering) ಹಾಗೂ ವೈದ್ಯಕೀಯ (Medical) ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಕೈಬರಹದ ಅರ್ಜಿಯೊಂದಿಗೆ ಸ್ವವಿವರ (Bio-data), ಆದಾಯ ದೃಢಪತ್ರಿಕೆ (Income Certificate) ಹಾಗೂ ವ್ಯಾಸಂಗ ದೃಢಪತ್ರಿಕೆ (Study Certificate)ಗಳನ್ನಿಟ್ಟು ಈ ಕೆಳಗಿನ ವಿಳಾಸಕ್ಕೆ ತಾ.15-09-2009ರೊಳಗೆ ತಲುಪುವಂತೆ ಕಳುಹಿಸಬೇಕೆಂದು ಅಪೇಕ್ಷಿಸುತ್ತೇವೆ.

**ಡಾ| ವೈ. ಸುದರ್ಶನ್‌ರಾವ್**

ಕೆನರಾ ಹೆಲ್ತ್ ಸೆಂಟರ್, ಅಂಜುಮಾನ್ ರಸ್ತೆ, ಸಿಟಿಬಸ್‌ಸ್ಟ್ಯಾಂಡ್ ಬಳಿ, ಉಡುಪಿ - 576 101.


## ದಿವಂಗತ ಕೆ. ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ-ಕುಳಾಯಿ

## ಪ್ರತಿಭಾ ಪುರಸ್ಕಾರ

2008-09ರ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಅಂತಿಮ ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ, ಮಂಗಳೂರು-4 ಇಲ್ಲಿ ನವರಾತ್ರಿ ಪ್ರಯುಕ್ತ ಜರಗುವ ನಾಡ ಹಬ್ಬದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿಂದ ಪುರಸ್ಕರಿಸಲಾಗುವುದು. ದ.ಕ. ಮತ್ತು ಉಡುಪಿ ಜಿಲ್ಲೆಯ ಅರ್ಹ ವಿದ್ಯಾರ್ಥಿಗಳು ತಮ್ಮ ದೂರವಾಣಿ, ವಿಳಾಸದೊಂದಿಗೆ ಅಂಕಪಟ್ಟಿಯ ಯಥಾ ನಕಲನ್ನು ದಿನಾಂಕ 10-09-2009ರ ಒಳಗಾಗಿ ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿಯವರಲ್ಲಿ ಕೊಡಬೇಕಾಗಿ ಕೋರಲಾಗಿದೆ. ನಾಡಹಬ್ಬದ ದಿನಾಂಕವನ್ನು ಪತ್ರ ಮೂಲಕ ತಿಳಿಸಲಾಗುವುದು.


## ದೇವಿಕೃಪಾ ಏಜೆನ್ಸೀಸ್, ನಂದಿಕೂರು

**ಫೋನ್ :** 2556536 (R), 2555466 (0)



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ| ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


Owned & Published by : K. Venugopal Rao, Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org